بِسْمِ اللّٰهِ الرَّحْمٰنِ الرَّحِيْمِ    نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ    وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

# ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ವರ್ಷ: 06

ವಾರ್ಷಿಕ ಶುಲ್ಕ ರೂ.600/-

ಸಂಚಿಕೆ: 01-02

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

02-09 ಜನವರಿ 2025, 02-09 ಸುಲಹ್ 1403 ಹಿಜರಿ ಶಮ್‌ಸಿ,
30 ಜಮಾದಿಉಸ್ಸಾನಿ, 07 ರಜಬ್ 1445 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಸರ್ವಶಕ್ತನಾದ ಅಲ್ಲಾಹನು ಹುಝೂರ್ ಅವರಿಗೆ ದೀರ್ಘ ಮತ್ತು ಸಕ್ರಿಯ ಜೀವನವನ್ನು ನೀಡಲಿ ಮತ್ತು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمْرِهٖ وَاَمْرِهٖ

## ಅಲ್ಲಾಹನ ಉಪದೇಶ

وَاِذَا رَاَ الَّذِيْنَ ظَلَمُوا الْعَذَابَ فَلَا يُخَفَّفُ عَنْهُمْ وَلَا هُمْ يُنْظَرُوْنَ۝

**(ಅನ್ನಹಲ್: 86)**

**ಅಂದರೆ: ದುಷ್ಕೃತ್ಯ ಮಾಡಿದವರು ಶಿಕ್ಷೆಯನ್ನು ಕಂಡರೆ, ಆಗ ಅವರಿಗೆ ಅದನ್ನು ಲಘೂಕರಿಸಲಾಗದು. ಅವರಿಗೆ ಕಾಲಾವಕಾಶವೂ ನೀಡಲಾಗದು.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಸುಳ್ಳು ಸಾಕ್ಷಿಯ ಮೂಲಕ ಇನ್ನೊಬ್ಬರ ಆಸ್ತಿಯನ್ನು ಪಡೆದುಕೊಳ್ಳುವ ವ್ಯಕ್ತಿಯು ಅಲ್ಲಾಹನನ್ನು ಎಂತಹ ಸ್ಥಿತಿಯಲ್ಲಿ ಭೇಟಿಯಾಗುತ್ತಾನೆ ಅಂದರೆ ಅಲ್ಲಾಹನು ಆತನಿಂದ ಬೇಸರಗೊಂಡಿರುವನು

**(2416-17)** ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್(ರ) ವರದಿ ಮಾಡುತ್ತಾರೆ ಹಝ್ರತ್ ಪೈಗಂಬರ್(ಸ) ಅವರು ಹೇಳಿದರು: "ಯಾರು ಪ್ರಮಾಣ ವಚನ ಸ್ವೀಕರಿಸುತ್ತಾರೋ ಅವರು ಅದರಲ್ಲಿ ಸುಳ್ಳುಗನಾಗಿದ್ದರೆ, ಮತ್ತು ಇದರ ಮೂಲಕ ( ಪ್ರಮಾಣ) ಓರ್ವ ಮುಸಲ್ಮಾನನ ಆಸ್ತಿಯು ಪಡೆದುಕೊಂಡರೆ. ಆತನು ಅಲ್ಲಾಹನನ್ನು ಆತನ ಮೇಲೆ ಕೋಪಗೊಂಡಿದುವ ಸ್ಥಿತಿಯಲ್ಲಿ ಭೇಟಿಯಾಗುತ್ತಾನೆ. ಹಝ್ರತ್ ಅಶ್‌ಅಸ್(ರ) ಹೇಳುತ್ತಿದ್ದರು: ಅಲ್ಲಹನ ಆಣೆ!! ಈ ಮಾತನ್ನು ಹಝ್ರತ್ ಪೈಗಂಬರ್(ಸ) ರವರು ನನ್ನ ಬಗ್ಗೆಯೇ ಹೇಳಿರುವರು. (ಘಟನೆ ಹೀಗಿತ್ತು) ನನ್ನ ಮತ್ತು ಓರ್ವ ಯಹೂದಿಯು ಒಮದು ಭೂಮಿ ಇತ್ತು ಆತನು (ಯಹೂದಿ) ನನ್ನನ್ನು ಆ ಭೂಮಿಯಲ್ಲಿ ಹಖ್ಖಿಲ್ಲ ಎಂದು ನಿರಾಕರಿಸಿದನು. ಆದ್ದರಿಂದ ನಾನು ಹಝ್ರತ್ ಪೈಗಂಬರ್(ಸ) ರವರ ಬಳಿ ಹೋದಾರ ರಸೂಲುಲ್ಲಾಹ್(ಸ) ರವರು ನನಗೆ ಕೇಳಿದರು: ನಿಮ್ಮ ಬಳಿ ಏನಾದರೂ ಪುರಾವೆಗಳಿವೆಯೇ? ಅದಕ್ಕೆ ನಾನು ಹೇಳಿದೆ: ಇಲ್ಲ (ಹಝ್ರತ್ ಅಶ್‌ಅಸ್) ಹೇಳುತ್ತಿದ್ದರು: ನೀವು(ಸ) ಆ ಯಹೂದಿಗೆ ಪ್ರಮಾಣ ಮಾಡಿ ಹೇಳಲು ಹೇಳಿದರು. ಅದಕ್ಕೆ (ಹಝ್ರತ್ ಅಶ್‌ಅಸ್) ಹೇಳುತ್ತಾರೆ: ಯಾ ರಸೂಲಲ್ಲಾಹ್! ಅವನು ಪ್ರಮಾಣ ಮಾಡುತ್ತಾನೆ ಮತ್ತು ನನ್ನ ಸಂಪತ್ತು ಹೋಗುತ್ತದೆ, ಆಗ ಸರ್ವಶಕ್ತನಾದ ಅಲ್ಲಾಹನು ಈ ವಚನವನ್ನು ಅವತರಿಸಿದನು: ಅಲ್ಲಾಹನ ಒಪ್ಪಂದ ಮತ್ತು ಅವರ ಪ್ರಮಾಣಗಳಿಗೆ ಪ್ರತಿಯಾಗಿ ಸಣ್ಣ ಮೊತ್ತವನ್ನು ತೆಗೆದುಕೊಳ್ಳುವವರು.

**(ಸಹೀಹ್ ಬುಖಾರಿ, ಸಂಪುಟ 4, ಕಿತಾಬ್ ಅಲ್-ಖುಸುಮಾತ್, 2008 ಖಾದಿಯಾನ್ ಪ್ರಕಟಿತ)**

ಯಾರಾದರು ಮೋಕ್ಷಗಳಿಸಲು ಬಯಸಿದರೆ ಮತ್ತು ಪರಿಶುದ್ಧ ಜೀವನ ಅಥವಾ ಶಾಶ್ವತ ಜೀವನ ಬಯಸಿದಲ್ಲಿ ಅವರು ತಮ್ಮ ಜೀವನವನ್ನು ಅಲ್ಲಾಹನಿಗೆ ಸಮರ್ಪಿಸಬೇಕು ಮತ್ತು ಪ್ರತಿಯೊಬ್ಬರೂ ಈ ಶ್ರೇಣಿ ಮತ್ತು ಸ್ಥಾನಮಾನವನ್ನು ಸಾಧಿಸಲು ಪ್ರಯತ್ನಿಸಬೇಕು ಮತ್ತು ಚಿಂತಿಸಬೇಕು.

ಎಲ್ಲಿಯವರೆಗೆ ಒಬ್ಬ ವ್ಯಕ್ತಿಯು ದೇವರಲ್ಲಿ ತಲ್ಲೀನಾಗದ ಹೊರತು, ದೇವರಲ್ಲಿ ಇದ್ದು ಸಾಯುವುದಿಲ್ಲವೊ ಅವನು ಹೊಸ ಜೀವನವನ್ನು ಕಂಡುಕೊಳ್ಳಲು ಸಾಧ್ಯವಿಲ್ಲ

ಒಬ್ಬ ವ್ಯಕ್ತಿಯು ತನ್ನ ಜೀವನವನ್ನು ಅಲ್ಲಾಹನಿಗೆ ಮುಡಿಪಾಗಿಡದಿದ್ದರೆ, ಅಂತಹ ಜನರಿಗೆ ಅಲ್ಲಾಹನು ನರಕವನ್ನು ಸೃಷ್ಟಿಸಿದ್ದಾನೆ ಎಂಬುದನ್ನು ಅವನು ನೆನಪಿಸಿಕೊಳ್ಳಬೇಕು

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಸ್ವತಃ ನಾನೇ ಈ ಮಾರ್ಗದಲ್ಲಿ ಸಂಪೂರ್ಣ ಅನುಭವವನ್ನು ಹೊಂದಿದ್ದೇನೆ ಮತ್ತು ಸರ್ವಶಕ್ತನಾದ ಅಲ್ಲಾಹನ ಕೃಪೆ ಮತ್ತು ಅನುಗ್ರಹದಿಂದ ಮಾತ್ರ ನಾನು ಈ ಸೌಕರ್ಯ ಮತ್ತು ಆನಂದವನ್ನು ಅನುಭವಿಸಿದ್ದೇನೆ, ನಾನು ಬಯಸುವುದೇನೆಂದರೆ ಅಲ್ಲಾಹನ ಮಾರ್ಗದಲ್ಲಿ ಜೀವನವನ್ನು ಮುಡುಪಾಗಿಡಲು ಮರಣ ಹೊಂದಿ ಜೀವಿತವಾದರೆ ಮತ್ತೆ ಮರಣ ಹೊಂದಿ ಪುನಃ ಜೀವಿತವಾದರೆ ಪ್ರತಿಯೊಂದು ಬಾರಿ ನನ್ನ ಉತ್ಸಾಹವು ಸಂತೋಷದಿಂದ ಹೆಚ್ಚಾಗುತ್ತದೆ.

ಆದುದರಿಂದ, ನಾನೇ ಸ್ವತಃ ಅನುಭವಿಯಾಗಿದ್ದೇನೆ ಮತ್ತು ಅನುಭವಿಸಿದವನಾಗಿದ್ದೇನೆ ಮತ್ತು ಅಲ್ಲಾಹನು ನನಗೆ ಈ ವಕ್ಫ್‌ನ ಉತ್ಸಾಹವನ್ನು ನೀಡಿದ್ದಾನೆ, ಈ ವಕ್ಫ್‌ನಲ್ಲಿ ಯಾವುದೇ ಪ್ರತಿಫಲ ಅಥವಾ ಪ್ರಯೋಜನವಿಲ್ಲ ಬದಲಿಗೆ ನೋವು ಮತ್ತು ದುಃಖ ಮಾತ್ರವಿದೆ ಎಂದು ಹೇಳಿದರೂ, ನಾನು ಇಸ್ಲಾಂ ಧರ್ಮದ ಸೇವೆಯನ್ನು ನಿಲ್ಲಿಸಲು ಸಾಧ್ಯವಿಲ್ಲ, ಆದ್ದರಿಂದ ನಾನು ನನ್ನ ಜಮಾಅತ್ತಿಗೆ ಸಲಹೆ ನೀಡುವುದು ಮತ್ತು ಈ ಸಂದೇಶವನ್ನು ನೀಡುವುದು ನನ್ನ ಕರ್ತವ್ಯವೆಂದು ಪರಿಗಣಿಸುತ್ತೇನೆ. ಅದನ್ನು ಕೇಳುವುದು ಅಥವಾ ಕೇಳದಿರುವುದು ಅವರಿಗೆ ಬಿಟ್ಟದ್ದು! ಯಾರಾದರೂ ಮೋಕ್ಷವನ್ನು ಬಯಸಿ ಪರಿಶುದ್ಧ ಜೀವನ ಅಥವಾ ಶಾಶ್ವತ ಜೀವನವನ್ನು ಬಯಸುತ್ತಿದ್ದರೆ, ಅವನು ತನ್ನ ಜೀವನವನ್ನು ಅಲ್ಲಾಹನಿಗೆ ಮುಡಿಪಾಗಿಡಬೇಕು ಮತ್ತು ಅವನು ನನ್ನ ಜೀವನ, ನನ್ನ ಮರಣ, ನನ್ನು ಬಲಿದಾನ, ನನ್ನ ನಮಾಝ್ ಅಲ್ಲಾಹನಿಗೆ ಮಾತ್ರವಿದೆ ಎಂದು ಹೇಳುವ ಮಟ್ಟ ಮತ್ತು ಸ್ಥಾನಮಾನವನ್ನು ಪಡೆಯಬೇಕೆಂದು ಎಲ್ಲರೂ ಪ್ರಯತ್ನಿಸಬೇಕು ಮತ್ತು ಚಿಂತಿಸಬೇಕು. ಮತ್ತು ಹಝ್ರತ್ ಇಬ್ರಾಹೀಮ್‌ನಂತೆ ಅವನ ಆತ್ಮವು **ಅಸ್ಲಮ್‌ತು ಲಿರಬ್ಬಿಲ್ ಆಲಮೀನ್** (ಅಲ್‌ಬಖರ:132) ಅಂದರೆ ಸರ್ವಲೋಕಗಳ ಪರಿಪಾಲಕನಾದ ಒಡೆಯನಿಗೆ ನಾನು ಶರಣಾಗಿದ್ದೇನೆ ಎಂದು ಹೇಲಬೇಕು. ಎಲ್ಲಿಯ ವರೆಗೆ ಮನುಷ್ಯನು ದೇವರಲ್ಲಿ ತಲ್ಲೀನ ಆಗದ ಹೊರತು, ದೇವನಲ್ಲಿ ಸಾಯುವುದಿಲ್ಲವೊ ಅವನು ಹೊಸ ಜೀವನವನ್ನು ಪಡೆದುಕೊಳ್ಳಲು ಸಾಧ್ಯವಿಲ್ಲ.

ಆದ್ದರಿಂದ ನನ್ನೊಂದಿಗೆ ಸಂಬಂಧ ಹೊಂದಿರುವ ನೀವು, ದೇವರಿಗಾಗಿ ಜೀವನವನ್ನು ಸಮರ್ಪಿಸುವುದು ನನ್ನ ಜೀವನದ ಮುಖ್ಯ ಉದ್ದೇಶವೆಂದು ನಾನು ಪರಿಗಣಿಸುತ್ತೇನೆ ಎಂದು ನೀವು ನೋಡುತ್ತೀರಿ. ಹಾಗಾದರೆ ನೀವು ನಿಮ್ಮಲ್ಲಿ ಎಷ್ಟು ಜನ ನನ್ನ ಈ ಕಾರ್ಯವನ್ನು ನಿಮಗಾಗಿ ಪ್ರೀತಿಸುತ್ತೀರಿ ಮತ್ತು ನಿಮ್ಮ ಜೀವನವನ್ನು ದೇವರಿಗೆ ಅರ್ಪಿಸುವುದನ್ನು ಪಾಲಿಸುತ್ತೀರಿ ಎಂದು ಪರಿಶೀಲಿಸಿಕೊಳ್ಳಿ.

ಒಬ್ಬ ವ್ಯಕ್ತಿಯು ತನ್ನ ಜೀವನವನ್ನು ಅಲ್ಲಾಹನಿಗೆ ಮುಡಿಪಾಗಿಡದಿದ್ದರೆ, ಅಂತಹ ಜನರಿಗೆ ಅಲ್ಲಾಹನು ನರಕವನ್ನು ಸೃಷ್ಟಿಸಿದ್ದಾನೆ ಎಂಬುದನ್ನು ಅವನು ನೆನಪಿಸಿಕೊಳ್ಳಬೇಕು. ಕೆಲವಿ ಮೂರ್ಖರು ಮತ್ತು ಅಜ್ಞಾನಿಗಳು ಪ್ರತಿಯೊಬ್ಬ ವ್ಯಕ್ತಿಯು ನರಕಕ್ಕೆ ಹೋಗಲೇಬೇಕು ಎಂದು ಅರ್ಥಮಾಡಿಕೊಂಡಿದ್ದಾರೆ ಅದು ಅವರ ತಪ್ಪು ಗ್ರಹಿಕೆಯಾಗಿದೆ ಎಂದು ಈ ಆಯತ್ ಸ್ಪಷ್ಟವಾಗಿ ತಿಳಿಯುತ್ತದೆ. ಹೌದು, ನರಕದ ಶಿಕ್ಷೆಯಿಂದ ಸಂಪೂರ್ಣವಾಗಿ ಸುರಕ್ಷಿತರಾಗಿರುವವರು ಕಡಿಮೆ ಪ್ರಮಾಣದಲ್ಲಿದ್ದಾರೆ ಎಂಬುದರಲ್ಲಿ ಸಂದೇಹವಿಲ್ಲ ಮತ್ತು ಇದು ಆಶ್ಚರ್ಯವೇನಿಲ್ಲ. ಅಲ್ಲಾಹನು ಹೇಳುತ್ತಾನೆ: **ಖಲೀಲುಮ್ಮಿನ್ ಇಬಾದಿ ಯಶ್ಕೂರು** (ಸಬಾ: 14) ನನ್ನ ಆರಾಧಕರಲ್ಲಿ ಕೃತಜ್ಞರು ಬಹಳ ವಿರಳರಾಗಿದ್ದಾರೆ.

**(ಮಲ್‌ಫೂಝಾತ್, ಸಂಪುಟ-1, ಪುಟ-501, ಪ್ರಕಟಿತ 2018, ಖಾದಿಯಾನ್)**

# ಖುತ್ಬ ಜುಮುಅ

ಹಝ್ರತ್ ಪೈಗಂಬರ್(ಸ)ರು ಬಯಸಿದ್ದರೆ ಅವರು ಯುದ್ಧವಿಲ್ಲದೆ ಮಕ್ಕಾವನ್ನು ಪ್ರವೇಶಿಸಬಹುದಿತ್ತು, ಆದರೆ ಹಝ್ರತ್ ಪೈಗಂಬರ್(ಸ)ರು ಈಗಾಗಲೇ ನಿರ್ಧರಿಸಿದ್ದರಿಂದ ಅವರು(ಸ)ರು ಮೊದಲು ಮಕ್ಕಾದ ಜನರ ಅನುಮತಿಯೊಂದಿಗೆ ತವಾಫ್ ಮಾಡಲು ಪ್ರಯತ್ನಿಸುತ್ತಾರೆ ಮತ್ತು ಮಕ್ಕಾದ ಜನರು ಸ್ವತಃ ಯುದ್ಧವಾಡಲು ಹೋರಾಟವನ್ನು ಪ್ರಾರಂಭಿಸಿದರೆ ಹೋರಾಡುತ್ತಾರೆ. ಆದ್ದರಿಂದ, ಮಕ್ಕಾಗೆ ಹೋಗುವ ಮಾರ್ಗವು ತೆರೆದಿದ್ದರೂ, ಅವರು ಹುದೈಬಿಯಾದಲ್ಲಿ ಬಿಡಾರ ಹೂಡಿದರು. (ಹಝ್ರತ್ ಮಸೀಹ್ ಮೌಊದ್(ಅ))

---

ಹುದೈಬಿಯಾದ ಸ್ಥಳದಲ್ಲಿ, ಮುಸ್ಲಿಮರು ಮತ್ತು ಖುರೈಷಿಗಳ ನಡುವೆ ಹುದೈಬಿಯಾ ಸಂಧಿ ಎಂಬ ಒಪ್ಪಂದಕ್ಕೆ ಸಹಿ ಹಾಕಲಾಯಿತು. ವರದಿಗಳಲ್ಲಿ, ಇದನ್ನು ಹುದೈಬಿಯಾ ಯುದ್ಧ ಎಂದೂ ಕರೆಯುತ್ತಾರೆ.

---

ಪ್ರಯಾಣದ ಸಮಯದಲ್ಲಿ... ಹಝ್ರತ್ ಪೈಗಂಬರ್(ಸ) ಬಳಸುತ್ತಿದ್ದ ಪಾತ್ರೆಯನ್ನು ಹೊರತುಪಡಿಸಿ ಯವುದೇ ಪಾತ್ರೆಯಲ್ಲಿ ನೀರಿಲ್ಲ ಸ್ಥಿತಿಯಿತ್ತು. ಆ ಸಂದರ್ಭದಲ್ಲಿ, ಸಹಾಬಗಳು ನೀರಿನ ಬಗ್ಗೆ ದೂರು ನೀಡಿದಾಗ, ಹಝ್ರತ್ ಪೈಗಂಬರ್(ಸ)ರು ತಮ್ಮ ಪಾತ್ರೆಯ ಬಾಯಿಯ ಮೇಲೆ ತಮ್ಮ ಅನುಗ್ರಹದಾಯಕ ಹಸ್ತವನ್ನು ಇರಿಸಿ ಪಾತ್ರೆಯ ಬಾಯಿಯನ್ನು ಬಾಗಿಸಿ ಸಹಾಬಗಳಿಗೆ ಹೇಳಿದರು: ಈಗ ನಿವು ನಿಮ್ಮ ಸ್ವಂತ ಪಾತ್ರೆಗಳನ್ನು ತಂದು ಅವುಗಳನ್ನು ತುಂಬಿರಿ. ವರದಿಗಾರರು ಹೇಳುತ್ತಾರೆ: ಆ ಸಮಯದಲ್ಲಿ ಹಝ್ರತ್ ಪೈಗಂಬರ್(ಸ)ರ ಬೆರಳುಗಳ ಒಳಗಿನಿಂದ ಚಿಲುಮೆ ಹರಿಯುತ್ತಿದ್ದಂತೆ ನೀರು ಚಿಮ್ಮುತ್ತಿತ್ತು. ಹೀಗೆ ಪ್ರತಿಯೊಬ್ಬರೂ ತಮ್ಮ ಅಗತ್ಯಕ್ಕೆ ಅನುಗುಣವಾಗಿ ನೀರನ್ನು ತೆಗೆದುಕೊಂಡರು ಮತ್ತು ಮುಸ್ಲಿಮರ ಸಂಕಟ ದೂರವಾಯಿತು.

---

ಅಲ್ಲಾಹನು ಹೇಳುತ್ತಾನೆ – ನನ್ನ ದಾಸರಲ್ಲಿ ಕೆಲವರು ಇಂದಿನ ಬೆಳಿಗ್ಗೆಯನ್ನು ನಿಜವಾದ ಸತ್ಯವಿಶ್ವಾಸದೊಂದಿಗೆ ಕಳೆದಿರುವರು. ಆದರೆ ಕೆಲವರು ಸತ್ಯನಿಷೇಧದ ಸ್ಥಿತಿಯಲ್ಲಿ ಚಂಚಲಚಿತ್ತರಾದರು. ಅದು ಹೇಗೆಂದರೆ, ಅಲ್ಲಾಹನ ಅನುಗ್ರಹ ಮತ್ತು ಕೃಪೆಯಿಂದ ಮಳೆ ಬಂತು ಎಂದು ಹೇಳಿದವರು ತಮ್ಮ ಸತ್ಯವಿಶ್ವಾಸದಲ್ಲಿ ನೆಲೆನಿಂತರು. ಈ ಮಳೆ ಇಂತಿಂತಹ ನಕ್ಷತ್ರಗಳ ಪ್ರಭಾವದಿಂದ ಬಂದಿತು ಎಂದು ಹೇಳಿದವರು ನಿಸ್ಸಂಶಯವಾಗಿಯೂ ಚಂದ್ರ, ಸೂರ್ಯನ ವಿಶ್ವಾಸಿಯಾದರು. ಅವರು ಅಲ್ಲಾಹನನ್ನು ನಿಷೇಧಿಸಿದರು.

## ಹುದೈಬಿಯಾ ಯುದ್ಧದ ಹಿನ್ನೆಲೆ, ಪರಿಸ್ಥಿತಿಗಳು ಹಾಗೂ ಘಟನೆಗಳ ವಿವರಾತ್ಮಕ ಪ್ರಸ್ತಾವನೆ

ಮುಕರ್ರಮ್ ಮುಹಮ್ಮದ್ ಅಬ್ದುಲ್ ವಹಾಬ್ ಸಾಹಿಬ್ ಆಫ್ ಬಾಂಗ್ಲಾದೇಶ ಅವರ ಪುತ್ರ ಅಝೀಝುಮ್ ಶೆಹೆರ್‌ಯಾರ್ ರಕೀಮ್ ಶಹೀದ್ ಮತ್ತು ಮುಕರ್ರಮ್ ಅಬ್ದುಲ್ಲಾ ಅಸ್‌ಅದ್ ಔದ ಸಾಹಿಬ್ ಆಫ್ ಕಬಾಬೀರ್ ಅವರಿಬ್ಬರು ಇತ್ತೀಚಿಗೆ ನಿಧನರಾದರ, ಅವರ ಸದ್ಗುಣಗಳ ಪ್ರಸ್ತಾವನೆ ಹಾಗೂ ನಮಾಝೆ ಜನಾಝ ಗ್ಹಾಯಿಬ್ ನಿರ್ವಹಣೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **15–11–2024** ರಂದು ನೀಡಿದ **ಖುತ್ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَ اِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಇಂದು ಹುದೈಬಿಯಾ ಸಂಧಿಗೆ ಸಂಬಂಧಿಸಿದ ಪ್ರಸ್ತಾಪವನ್ನು ಪ್ರಾರಂಭಿಸುವೆನು. ಹುದೈಬಿಯ ಸಂಧಿ ಹಿಜರೀ 6, ಧಿಲ್‌ಖಅದ ತಿಂಗಳಲ್ಲಿ, ಎಂದರೆ ಕ್ರಿ.ಶ. 628, ಮಾರ್ಚ್‌ನಲ್ಲಿ ನಡೆದಿತ್ತು. ಇದನ್ನು ಹುದೈಬಿಯಾ ಯುದ್ಧವೆಂದೂ ಕರೆಯಲಾಗುತ್ತದೆ. ಹುದೈಬಿಯಾ ಯುದ್ಧದ ಕುರಿತು ಅಲ್ಲಾಹನು ಸೂರಃ ಫತಹ್ ಎಂಬ ಹೆಸರಿನಲ್ಲಿ ಒಂದು ಪೂರ್ತಿ ಅಧ್ಯಾಯವನ್ನು ಅವತೀರ್ಣಗೊಳಿಸಿರುವನು. ಈ ಸೂರತ್ತಿನ ಆರಂಭದ ವಚನಗಳಲ್ಲಿ ಅಲ್ಲಾಹನು ಹೀಗೆ ಹೇಳಿರುವನು: **ಅಊಝುಬಿಲ್ಲಾಹಿ ಮಿನಶ್ಶೈತಾನ್ ನಿರ್‍ರಜೀಮ್– ಇನ್ನಾ ಫತಹ್‌ನಾ ಲಕ ಫತ್‌ಹಮ್ಮುಬೀನಾ. ಲಿಯಗ್ಫಿರಲಕಲ್ಲಾಹು ಮಾ ತಖದ್ದಮ ಮಿನ್ ಝಂಬಿಕ ವಮಾ ತಅಖ್ಖರ ವ ಯುತಿಮ್ಮ ನಿಅ್‌ಮತಹೂ ಅಲೈಹ ವಯಹ್‌ದೀಕ ಸಿರಾತಮ್ಮಿಸ್ತಖೀಮ. ವ್ವಯನ್‌ಸುರಕಲ್ಲಾಹು ನಸ್ರನ್ ಅಝೀಝಾ–** (ಅಲ್‌ಫತಹ್: 2 ರಿಂದ 4)

ನಿಜವಾಗಿಯೂ ನಾವು ನಿನಗೆ ಸ್ಪಷ್ಟವಾದೊಂದು ವಿಜಯವನ್ನು ನೀಡಿರುವೆವು. ನಿನ್ನ ಹಿಂದಿನ ಮತ್ತು ಮುಂದಿನ ಕುಂದುಕೊರತೆಗಳನ್ನು ಅಲ್ಲಾಹನು ನಿನ್ನಿಂದ ಮರೆಮಾಚಲಿಕ್ಕೂ ನಿನ್ನ ಮೇಲೆ ಅವನ ಅನುಗ್ರಹಗಳನ್ನು ಪೂರ್ಣಗೊಳಿಸಲಿಕ್ಕೂ ನಿನ್ನನ್ನು ಸತ್ಪಥದಲ್ಲಿ ನಡೆಸಲಿಕ್ಕೂ; ಅಲ್ಲಾಹನು ನಿನಗೆ ಮಹತ್ವದ ಸಹಾಯದಿಂದ ನೆರವಾಗಲಿಕ್ಕೂ ಬೇಕಾಗಿ.

ಹುದೈಬಿಯಾ ಯುದ್ಧವನ್ನು ಏಕೆ ಹುದೈಬಿಯಾ ಯುದ್ಧ ಎಂದು ಕರೆಯಲಾಗುತ್ತದೆ ಮತ್ತು ಅದರ ಅರ್ಥವೇನು? ಇದನ್ನು ಸಂಕ್ಷಿಪ್ತವಾಗಿ ವಿವರಿಸುವೆನು. ಹುದೈಬಿಯ ಒಂದು ಬಾವಿಯ ಹೆಸರಾಗಿತ್ತು. ಅದು ಇಸ್ಲಾಮಿನ ಆರಂಭದಲ್ಲಿ ಯಾತ್ರಿಕರಿಗೂ ಹಜ್ಜ್ ತೀರ್ಥಾಟಕರಿಗೂ ಉಪಯುಕ್ತವಾಗುತ್ತಿತ್ತು. ಆದರೆ ಅಲ್ಲಿ ಜನವಾಸವಿರಲಿಲ್ಲ. ಹುದೈಬಿಯಾ ಮಕ್ಕಾದಿಂದ ಒಂಬತ್ತು ಮೈಲುಗಳ ದೂರದಲ್ಲಿದೆ ಮತ್ತು ಮಕ್ಕಾದಿಂದ ಮದೀನಾಗೆ ಸುಮಾರು ಇನ್ನೂರೈವತ್ತು ಮೈಲುಗಳಷ್ಟು ದೂರವಿದೆ. ಅಂದಹಾಗೆ, ಮದೀನಾದಿಂದ ಹುದೈಬಿಯಾಗೆ ಇರುವ ಅಂತರ ಸುಮಾರು ಇನ್ನೂರ ನಲವತ್ತೊಂದು ಮೈಲುಗಳು. ಹುದೈಬಿಯಾ ಮಕ್ಕಾದ ಪಶ್ಚಿಮ ಭಾಗದ ಗಡಿಪ್ರದೇಶವಾಗಿದೆ ಮತ್ತು ಕೆಲವರ ಪ್ರಕಾರ, ಹೆಚ್ಚಿನ ಭಾಗವು ಹರಮ್‌ನ ಒಳಗಿದೆ ಮತ್ತು ಕೆಲವು ಭಾಗವು ಹರಮ್‌ನ ಹೊರಗಿದೆ ಎಂದು ಹೇಳುತ್ತಾರೆ. ಇಲ್ಲಿ, ಹುದೈಬಿಯಾದ ಸ್ಥಳದಲ್ಲಿ, ಮುಸ್ಲಿಮರು ಮತ್ತು ಖುರೈಷಿಗಳ ನಡುವೆ ಹುದೈಬಿಯಾ ಸಂಧಿ ಎಂಬ ಒಪ್ಪಂದಕ್ಕೆ ಸಹಿ ಹಾಕಲಾಯಿತು. ವರದಿಗಳಲ್ಲಿ, ಇದನ್ನು ಹುದೈಬಿಯಾ ಯುದ್ಧ ಎಂದೂ ಕರೆಯುತ್ತಾರೆ.

ಒಂದು ಹದೀಸಿನಲ್ಲಿ ಇದನ್ನು ಗಝ್ವಾ ತಿಹಾಮಾ ಎಂದೂ ಕರೆಯಲಾಗಿದೆ. ಮಕ್ಕಾ ಮತ್ತು ಅದರ ಸುತ್ತಲಿನ ಪ್ರದೇಶವನ್ನು ತೀವ್ರವಾದ ಶಾಖ ಮತ್ತು ಬೇಸಿಗೆ ಬಿಸಿಗಾಳಿಯ ಕಾರಣದಿಂದ ತಿಹಾಮಾ ಎಂದು ಕರೆಯಲಾಗುತ್ತಿತ್ತು, ಆದ್ದರಿಂದ ಇದಕ್ಕೆ ತಿಹಾಮಾ ಎಂದು ಹೆಸರಿಸಲಾಗಿದೆ.

(ಸಬ್ಲುಲ್ ಹುದಾ, ಸಂಪುಟ–5, ಪುಟ–70, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಅಟ್ಲಾಸ್ ಸೀರತ್ ನಬ್ವಿ ಪುಟ–326) (ಫರ್ಹಾಂಗ್ ಸೀರತ್ ಪುಟ–100, ಝುವಾರಾ ಅಕಾಡೆಮಿ ಕರಾಚಿ) (ಅಸ್ಸಹೀಹ್ ಮಿನ್ ಸೀರತ್ ಅಲ್–ನಬಿ ಅಲ್–ಅಝುಮ್, ಸಂಪುಟ–15, ಪುಟ–59 ಅಲ್–ಮರ್ಕಝುಲ್ ಇಸ್ಲಾಮಿ ಲಿದ್ದರಾಸಾತ್) (ಎನ್‌ಸೈಕ್ಲೋಪೀಡಿಯಾ ಸೀರತುನ್ನಬೀ(ಸ), ಪುಟ–188, ಝುವರ್‌ಝುವರ್ ಪಬ್ಲಿಷರ್ಸ್) (ಅಲ್‌ಮುಜಮುಲ್ ಅವ್ಸತ್, ಸಂಪುಟ–2, ಪುಟ–356, ದಾರುಲ್

ಕುತುಬ್ ಇಲ್‌ಮಿಯಾ ಬೈರುತ್) (ಸಬ್ಲುಲ್ ಹುದಾ, ಸಂಪುಟ-5, ಪುಟ-87, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಇದಕ್ಕೆ ಕಾರಣವೇನು? ಒಂದು ಕನಸಿನ ಆಧಾರದಲ್ಲಿ ಹಝ್ರತ್ ಪೈಗಂಬರ್(ಸ) ಹುದೈಬಿಯ ಯಾತ್ರೆಯನ್ನು ಮಾಡಿದ್ದರು ಎಂದು ವರದಿಗಳಿಂದ ಮತ್ತು ಚರಿತ್ರೆಗಳಿಂದ ತಿಳಿದುಬರುತ್ತದೆ. ಒಂದು ಹದೀಸ್‌ನ ಪ್ರಕಾರ ಹಝ್ರತ್ ಪೈಗಂಬರ್(ಸ)ರಿಗೆ ಕನಸಿನಲ್ಲಿ ಹೀಗೆ ತೋರಿಸಲಾಯಿತು: ಹಝ್ರತ್ ಪೈಗಂಬರ್(ಸ) ತನ್ನ ಸಹಾಬಿಯರ ಜೊತೆಗೆ ಶಾಂತಿಯ ಸ್ಥಿತಿಯಲ್ಲಿ, ತಮ್ಮ ತಲೆಗಳನ್ನು ಮುಂಡಣ ಮಾಡುತ್ತಾ, ಕೂದಲುಗಳನ್ನು ಕತ್ತರಿಸುತ್ತಾ ಮಕ್ಕಾದಲ್ಲಿ ಪ್ರವೇಶಿಸುತ್ತಾರೆ ಮತ್ತು ಹಝ್ರತ್ ಪೈಗಂಬರ್(ಸ) ಬೈತುಲ್ಲಾಹ್ ಕಅ್‌ಬ ಭವನದಲ್ಲಿ ಪ್ರವೇಶಿಸುತ್ತಾರೆ. ಅವರು ಅದರ ಕೀಲಿಗೈಯನ್ನು ಪಡೆಯುತ್ತಾರೆ ಮತ್ತು ಅರಫಾತ್ ಮೈದಾನದಲ್ಲಿ ತಂಗುವವರ ಜೊತೆಗೆ ತಂಗುತ್ತಾರೆ. ಈ ಕನಸಿನ ಆಧಾರದಲ್ಲಿ ಹಝ್ರತ್ ಪೈಗಂಬರ್(ಸ)ರ ಜೊತೆಗೆ ಹೊರಡಲು ಅರಬ್ ಮತ್ತು ಆಸುಪಾಸಿನ ಮರಳುಗಾಡಿನ ನಿವಾಸಿಗಳನ್ನು ಕರೆಯಲಾಯಿತು. ಈ ಯಾತ್ರೆಯಲ್ಲಿ ಮುಸ್ಲಿಮರ ಬಳಿ ಕವಚದಲ್ಲಿ ಹಾಕಲ್ಪಟ್ಟ ಖಡ್ಗಗಳನ್ನು ಹೊರತುಪಡಿಸಿ ಬೇರೆ ಆಯುಧಗಳು ಏನೂ ಇರಲಿಲ್ಲ. ಆ ಕಾಲದಲ್ಲಿ ಪ್ರತಿಯೊಬ್ಬರು ಮನೆಯಿಂದ ಹೊರಡುವಾಗ ತಮ್ಮ ಬಳಿ ಖಡ್ಗವನ್ನು ಇರಿಸುತ್ತಿದ್ದರು. ತಮ್ಮ ಬಳಿ ಖಡ್ಗವಿರುವವನು ಯುದ್ಧ ಮಾಡುವವನು ಎಂದೇನೂ ಇಲ್ಲ. ಆಯುಧಗಳನ್ನು ಜೊತೆಗೆ ಕೊಂಡು ಹೋಗದೇ ಇರುವುದರ ಕುರಿತು ಹಝ್ರತ್ ಉಮರ್(ರ) ಪ್ರಶ್ನಿಸಿದಾಗ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ನಾನು ಉಮ್ರ ಮಾಡುವ ಉದ್ದೇಶದಿಂಧ ಹೋಗುತ್ತಿದ್ದೇನೆ. ಆದ್ದರಿಂದ ಆಯುಧವನ್ನು ಜೊತೆಯಲ್ಲಿ ಇರಿಸಲು ನಾನು ಇಷ್ಟಪಡುವುದಿಲ್ಲ.

ಹಝ್ರತ್ ಪೈಗಂಬರ್(ಸ)ರ ಈ ಕನಸಿನ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಈ ಕನಸನ್ನು ಕಂಡ ನಂತರ ಉಮ್ರಾಗಾಗಿ ತಯಾರಿ ಮಾಡಲು ಸಹಾಬಿಯರೊಡನೆ ಮನವಿ ಮಾಡಿದರು. ಉಮ್ರ ಎಂಬುದು ಚಿಕ್ಕ ಮಟ್ಟದ ಹಜ್ಜ್ ಆಗಿದೆ. ಅದರಲ್ಲಿ ಹಜ್ಜಿನಲ್ಲಿ ಮಾಡಲಾಗುವ ಕೆಲವು ಅನುಷ್ಠಾನ ಕರ್ಮಗಳನ್ನು ಉಪೇಕ್ಷಿಸಿ ಕಅ್‌ಬ ಭವನದ ಪರಿಕ್ರಮಣ ಮತ್ತು ಕುರ್ಬಾನಿಯನ್ನು ಮಾಡಲಾಗುತ್ತದೆ. ಈ ಆರಾಧನೆಗಾಗಿ ವರ್ಷದ ಯಾವುದಾದರೂ ವಿಶಿಷ್ಟವಾದ ದಿನವನ್ನು ನಿಗದಿಪಡಿಸಲಾಗಿಲ್ಲ. ಇದನ್ನು ವರ್ಷದಲ್ಲಿ ಯಾವುದೇ ಸಮಯ ಅಥವಾ ಕಾಲದಲ್ಲಿ ಮಾಡಬಹುದಾಗಿದೆ.

(ಸೀರತ್ ಖಾತಮುನ್ನಬಿಯೀನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ-749)

ಹುದೈಬಿಯಾದ ಸಂದರ್ಭದಲ್ಲಿ ಮುಸ್ಲಿಮರ ಸಂಖ್ಯೆ ಎಷ್ಟು ಇತ್ತು? ಇದರಲ್ಲಿಯೂ ಭಿನ್ನಭಿಪ್ರಾಯವಿದೆ. ಒಂದು ವರದಿಯ ಪ್ರಕಾರ ಒಂದು ಸಾವಿರಕ್ಕಿಂತ ಸ್ವಲ್ಪ ಹೆಚ್ಚಾಗಿತ್ತು. ಮತ್ತೊಂದು ವರದಿಯಲ್ಲಿ ಒಂದು ಸಾವಿರದ ಮುನ್ನೂರು ಇದ್ದರು ಎಂದಾಗಿದೆ. ಇನ್ನೊಂದು ವರದಿಯಲ್ಲಿ ಒಂದು ಸಾವಿರದ ಸಾನ್ನೂರು ಎಂದು ಪ್ರಸ್ತಾಪಿಸಲಾಗಿದೆ. ಹೀಗೆ, ಒಂದು ಸಾವಿರದ ಏಳು ನೂರರ ವರೆಗೂ ವರದಿಗಳಲ್ಲಿ ಪ್ರಸ್ತಾಪಿಸಲಾಗಿದೆ. ಅಂದರೆ ಇದರ ಸಂಖ್ಯೆಯನ್ನು ಒಂದು ಸಾವಿರದಿಂದ ಒಂದು ಸಾವಿರದ ಏಳುನೂರು ತನಕವಿತ್ತು ಎಂದು ಹೇಳಲಾದ ವಿಭಿನ್ನ ವರದಿಗಳಿವೆ.

(ಅಲ್-ಬುಖಾರಿ ಕಿತಾಬುಲ್ ಮನಾಸಿಕ್, ಹದೀಸ್-1694) (ಬುಖಾರಿ ಕತಾಬುಲ್ ಮಗ್ಝಿ, ಬಾಬ್ ಗಝ್ವಾ ಹುದೈಬಿಯಾ ಹದೀಸ್-4155, 4154, 4152) (ಫತ್‌ಹುಲ್‌ಬಾರಿ, ಸಂಪುಟ-7, ಪುಟ-559, ಪ್ರಾಚೀನ ಗ್ರಂಥಾಲಯ)

ಹೊರಡುವ ಸಮಯ ಬಂದಾಗ, ವಧಿಸಬೇಕಾದ ಜಾನುವಾರುಗಳನ್ನು ಹಝ್ರತ್ ನಾಜಿಯ ಬಿನ್ ಜುಂದುಬ್ ಅಸ್ಲಮಿ(ರ) ಅವರಿಗೆ ಹಸ್ತಾಂತರಿಸಲಾಯಿತು, ಅವರು ಅವುಗಳನ್ನು ದುಲ್-ಹಲೀಫಾಗೆ ಕರೆದೊಯ್ದರು. ದುಲ್-ಹಿಲೈಫಾ ಮದೀನಾದಿಂದ ಆರು ಅಥವಾ ಏಳು ಮೈಲುಗಳಷ್ಟು ದೂರದಲ್ಲಿದೆ. ಪ್ರಯಾಣಕ್ಕೆ ಹೋಗುವಾಗ, ಹಝ್ರತ್ ಪೈಗಂಬರ್(ಸ)ರು ಯಾವಾಗಲೂ ಮದೀನಾದಲ್ಲಿ ಖಯಿಮ್ ಮಖಾಮ್ ಅಥವಾ ಅಮೀರ್ ಮಖಾಮಿಯನ್ನು ನೇಮಿಸುತ್ತಿದ್ದರು. ಈ ಪ್ರಯಾಣಕ್ಕೆ ಹೊರಡುವ ಮೊದಲು, ಇಬ್ನ್ ಸಅದ್(ರ) ಅವರ ವರದಿಯ ಪ್ರಕಾರ, ಅವರು(ಸ) ಹಝ್ರತ್ ಅಬ್ದುಲ್ಲಾ ಬಿನ್ ಉಮ್ಮೆ ಮಖ್ತೂಮ್(ರ) ಅವರನ್ನು ಮದೀನಾದಲ್ಲಿ ತಮ್ಮ ಉಪನಾಯಕರನ್ನಾಗಿ ನೇಮಿಸಿದರು. ಆದರೆ ಇಬ್ನ್ ಹಿಶಾಮ್‌ರ ವರದಿಯ ಪ್ರಕಾರ ಅವರು ಹಝ್ರತ್ ನುಮೈಲಾ ಬಿನ್ ಅಬ್ದುಲ್ಲಾ(ರ) ಅವರನ್ನು ಉಪನಾಯಕರನ್ನಾಗಿ ನೇಮಕ ಮಾಡಿದರು ಮತ್ತು ಬಲಾಜುರಿ ಅವರು ಹಝ್ರತ್ ಅಬು ರುಹ್ಮ್ ಕುಲ್ತುಮ್ ಬಿನ್ ಹುಸೇನ್ ಅವರನ್ನು ಉಲ್ಲೇಖಿಸಿದ್ದಾರೆ ಮತ್ತು ಕೆಲವರ ಪ್ರಕಾರ, ಹಝ್ರತ್ ಇಬ್ನ್ ಉಮ್ ಮಕ್ತೂಮ್ ಅವರನ್ನು ಇಮಾಮುಸ್ಸಲಾತ್ ಆಗಿ ನೇಮಿಸಲಾಯಿತು ಮತ್ತು ಉಳಿದವರೆಲ್ಲರನ್ನು ಉಪನಾಯಕರನ್ನಾಗಿ ನೇಮಿಸಲಾಯಿತು ಎಂದಾಗಿದೆ. ವಿಭಿನ್ನ ವರದಿಗಳಿವೆ.

(ಸಬ್ಲುಲ್ ಹುದಾ, ಸಂಪುಟ-5, ಪುಟ-33, ದಾರುಲ್ ಕುತುಬ್ ಇಲ್‌ಮಿಯಾ) (ಫರ್ಹಂಗ್ ಸೀರತ್, ಪುಟ-105)

ಹಝ್ರತ್ ಪೈಗಂಬರ್(ಸ) ಮತ್ತು ಸಹಾಬಗಳ ಪ್ರಯಾಣಕ್ಕಾಗಿ ಸಿದ್ಧತೆ ಮತ್ತು ನಿರ್ಗಮನದ ವಿವರಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ: ಈ ಘೋಷಣೆ ಮಾಡಿದ ನಂತರ, ಹಝ್ರತ್ ಪೈಗಂಬರ್(ಸ)ರು ತಮ್ಮ ಮನೆಗೆ ಪ್ರವೇಶಿಸಿ ಸ್ನಾನ ಮಾಡಿ ಸುಹಾರ್‌ನಿಂದ ತಯಾರಿಸಲಾದ ಎರಡು ಬಟ್ಟೆಗಳನ್ನು ಧರಿಸಿದರು. ಸುಹಾರ್ ಯೆಮೆನ್‌ನಲ್ಲಿರುವ ಒಂದು ಪಟ್ಟಣವಾಗಿದ್ದು ಅಲ್ಲಿನ ಬಟ್ಟೆಗಳು ಚೆನ್ನಾಗಿರುತ್ತವೆ. ತದನಂತರ ಅವರು(ಸ) ತಮ್ಮ ಬಾಗಿಲಿಗೆ ಹೊರಬಂದರು ಮತ್ತು ಅಲ್ಲಿಂದ ತಮ್ಮ ಒಂಟೆ ಖಸ್ವಾವನ್ನು ಸವಾರಿಯಾದರು. ಈ ಯಾತ್ರೆಯಲ್ಲಿ ಹಝ್ರತ್ ಪೈಗಂಬರ್(ಸ)ರ ಜೊತೆಗೆ ಅವರ ಪತ್ನಿಯಾದ ಹಝ್ರತ್ ಉಮ್ಮೇ ಸಲ್ಮಾ(ರ) ಇದ್ದರು. ಹಝ್ರತ್ ಪೈಗಂಬರ್(ಸ) ಧುಲ್‌ಖಅದ ಮಾಸದ ಆರಂಭದಲ್ಲಿ ಸೋಮವಾರದಂದು ಹೊರಟರು. ಧುಲ್‌ಹಲೀಫಗೆ ತಲುಪಿ ಅಲ್ಲಿ ಝುಹರ್ ನಮಾಝ್ ನಿರ್ವಹಿಸಿದರು. ಅನಂತರ ಕುರ್ಬಾನಿಗಾಗಿ ಎಪ್ಪತ್ತು ಜಾನುವಾರುಗಳನ್ನು ಪಡೆದು ಅವುಗಳಿಗೆ ಹಾರವನ್ನು ಹಾಕಿಸಿದರು. ಅನಂತರ ಒಂಟೆಗಳ ಗೂನುಗಳಿಗೆ ಗುರುತು ಹಾಕಿದರು. ಇತರ ಜಾನುವಾರುಗಳ ಮೇಲೆ ಹಝ್ರತ್ ನಾಜಿಯ(ರ) ಎಂಬ ಹೆಸರಿನ ಸಹಾಬಿ ಗುರುತು ಹಾಕಿದರು. ಉಳಿದ ಮುಸ್ಲಿಮರೂ ಕೂಡ ತಮ್ಮ ಜಾನುವಾರುಗಳಿಗೆ ಹಾರ ಹಾಕಿದರು. ಈ ಯಾತ್ರೆಯಲ್ಲಿ ಮುಸ್ಲಿಮರ ಬಳಿ ಇನ್ನೂರು ಕುದುರೆಗಳು ಇದ್ದುವು.

ಹಝ್ರತ್ ಪೈಗಂಬರ್(ಸ)ರು ಇಹ್ರಾಮ್ ಧರಿಸುವುದರ ಬಗ್ಗೆ ವಿವರಗಳು ಈ ಕೆಳಗಿನ ರೀತಿಯಲ್ಲಿ ಕಂಡುಬರುತ್ತವೆ: ಹಝ್ರತ್ ಪೈಗಂಬರ್(ಸ)ರು ಎರಡು ರಕಅತ್ ನಮಾಝನ್ನು ನಿರ್ವಹಿಸಿ ಧುಲ್ ಹಲೀಫಾದ ಮಸೀದಿಯ ಬಾಗಿಲಿನ ಬಳಿ ಸವಾರಿ ಮಾಡಿದರು. ಹಝ್ರತ್ ಪೈಗಂಬರ್(ಸ)ರು ಉಮ್ರಾದ ಇಹ್ರಾಮ್ ಅನ್ನು ಹಾಕಿದರು, ಇದರಿಂದಾಗಿ ಅವರು ಬೈತುಲ್ಲಾಹ್‌ಗೆ ಭೇಟಿ ನೀಡಲು ಮತ್ತು ಅದಕ್ಕೆ ಗೌರವ ಸಲ್ಲಿಸಲು ಬಂದಿದ್ದಾರೆ ಎಂದು ಜನರಿಗೆ ತಿಳಿಯುತ್ತದೆ. ನಂತರ ಅವರು ಈ ತಲ್ಬಿಯಾವನ್ನು ಪಠಿಸಿದರು.

**ಲಬ್ಬೈಕ್ ಅಲ್ಲಾಹುಮ್ಮ ಲಬ್ಬೈಕ ಲಾ ಶರೀಕ ಲಕ ಲಬ್ಬೈಕ-**
**ಇನ್ನಲ್ ಹಮ್‌ದ ವನ್ನಿಮತ ಲಕವಲ್‌ಮುಲ್ಕ ಲಾ ಶರೀಕಲಕ**

ನಾನು ಹಾಜರಿದ್ದೇನೆ ಓ ಅಲ್ಲಾಹ್! ನಾನು ಹಾಜರಿದ್ದೇನೆ, ನಿನಗೆ ಯಾವುದೇ ಪಾಲುದಾರರಿಲ್ಲ.

ಎಲ್ಲಾ ಪ್ರಶಂಸೆ ಮತ್ತು ಅನುಗ್ರಹಗಳು ನಿನ್ನದಾಗಿದೆ ಮತ್ತು ಒಡೆಯತನವೂ ನಿನ್ನದೇ ಆಗಿದೆ. ನಿನಗೆ ಯಾವುದೇ ಪಾಲುದಾರರಿಲ್ಲ.

ಹಝ್ರತ್ ಪೈಗಂಬರ್(ಸ)ರು ಖುರೈಷಿಗಳ ಸ್ಥಿತಿಗತಿಗಳ ಬಗ್ಗೆ ತಿಳಿದುಕೊಳ್ಳಲು ಹಝ್ರತ್ ಬುಸರ್ ಬಿನ್ ಸುಫಿಯಾನ್(ರ) ಅವರನ್ನು ಮಾಹಿತಿದಾರರನ್ನಾಗಿ ಮುಂದಕ್ಕೆ ಕಳುಹಿಸಿದರು ಮತ್ತು ಅವರ ಬೆಂಬಲಕ್ಕಾಗಿ ಮತ್ತೆ ಹಝ್ರತ್ ಪೈಗಂಬರ್(ಸ)ರು ಹಝ್ರತ್ ಅಬ್ಬಾದ್ ಬಿನ್ ಬಿಶರ್(ರ) ಅವರನ್ನು ಕಳುಹಿಸಿದರು ಮತ್ತೊಂದು ವರದಿಯ ಪ್ರಕಾರ ಹಝ್ರತ್ ಸಅದ್ ಬಿನ್ ಝೈದ್ ಅಶ್‌ಹಲೀ ಅವರನ್ನು ಇಪ್ಪತ್ತು ಕುದುರೆ ಸವಾರರೊಂದಿಗೆ ಕಳುಹಿಸಿದರು.

(ಸಬ್ಲುಲ್ ಹುದಾ, ಸಂಪುಟ-5, ಪುಟಗಳು 33-34, 80 ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ವಿವಿಧ ಸ್ಥಳಗಳಲ್ಲಿ ನಿಲ್ಲಿಸಿ, ಹಝ್ರತ್ ಪೈಗಂಬರ್(ಸ)ರು ಮದೀನಾದಿಂದ ಎಪ್ಪತ್ತಮೂರು ಕಿಲೋಮೀಟರ್ ದೂರದಲ್ಲಿರುವ ರುಹಾ ಎಂಬ ಸ್ಥಳಕ್ಕೆ ತಲುಪಿದಾಗ, ಕೆಂಪು ಸಮುದ್ರದ ಕರಾವಳಿಯ ಘೈಕಾ ಕಣಿವೆಯಲ್ಲಿ ಕೆಲವು ಮುಶ್ರಿಕೀನರು ಇದ್ದಾರೆ ಎಂಬ ಸುದ್ದಿ ಅವರಿಗೆ ಲಭಿಸಿತು. ಅವರು ಇದ್ದಕ್ಕಿದ್ದಂತೆ ಮುಸ್ಲಿಮರ ಮೇಲೆ ದಾಳಿ ಮಾಡಬಹುದು ಎಂಬ ಅಪಾಯವಿತ್ತು. ಆದ್ದರಿಂದ ಅವರು ಉಮ್ರಾದ ಇಹ್‌ರಾಮ್ ಧರಿಸದಿದ್ದ ಓರ್ವ ಸಹಾಬಿ ಹಝ್ರತ್ ಅಬೂಖತಾದ ಅನ್ಸಾರಿ(ರ) ಅವರನ್ನು ಸಹಾಬಿಗಳ ಒಂದು ಗುಂಪಿನೊಂದಿಗೆ ಕಳುಹಿಸಿದರು.

(ಫತ್‌ಹಲ್ ಬಾರಿ, ಸಂಪುಟ-4, ಪುಟ-28, ಖದೀಮಿ ಕುತುಬ್ ಖಾನ) (ಸೀರತ್ ಎನ್‌ಸೈಕ್ಲೋಪೀಡಿಯಾ, ಸಂಪುಟ-8, ಪುಟ-50, ದಾರುಸ್ಸಲಾಮ್)

ಈ ಪ್ರಯಾಣದಲ್ಲಿ ಕೆಲವು ಪವಾಡಗಳನ್ನು ಸಹ ಉಲ್ಲೇಖಿಸಲಾಗಿದೆ, ಈ ಯಾತ್ರೆಯ ವೇಳೆ ಹಝ್ರತ್ ಪೈಗಂಬರ್(ಸ) ಒಂದು ನೀರಿನ ಪಾತ್ರೆಯಿಂದ ವುಝೂ ಮಾಡುತ್ತಿದ್ದಾಗ ಜನರು ಹಝ್ರತ್ ಪೈಗಂಬರ್(ಸ)ರ ಸುತ್ತ ಬಂದು ಸೇರಿದರು. ಏನಾಯಿತು ಎಂದು ಹಝ್ರತ್ ಪೈಗಂಬರ್(ಸ) ಕೇಳಿದರು. ಸಹಾಬಿಯರು ಹೇಳಿದರು: ನಿಮ್ಮ ಬಳಿಯಲ್ಲಿರುವ ಈ ನೀರನ್ನು

ಹೊರತುಪಡಿಸಿ ನಮ್ಮಲ್ಲಿ ಯಾರ ಬಳಿಯಲ್ಲೂ ಕುಡಿಯಲೋ ವುಝೂ ಮಾಡಲೋ ಬೇರೆ ನೀರು ಇಲ್ಲ. ಇದನ್ನು ಆಲಿಸಿದಾಗ ಹಝ್ರತ್ ಪೈಗಂಬರ್(ಸ) ಆ ಪಾತ್ರೆಯಲ್ಲಿ ತನ್ನ ಕೈಯನ್ನು ಇರಿಸಿದರು. ಆಗ ಹಝ್ರತ್ ಪೈಗಂಬರ್(ಸ)ರ ಬೆರಳುಗಳ ನಡುವಿನಿಂದ ನೀರಿನ ಚಿಲುಮೆ ಹೊರಡಲು ತೊಡಗಿತು. ಹಝ್ರತ್ ಜಾಬಿರ್(ರ) ಹೇಳುತ್ತಾರೆ: ನಾವು ಆ ನೀರನ್ನು ಕುಡಿದೆವು ಮತ್ತು ವುಝೂ ಮಾಡಿದೆವು. ಆ ಸಂದರ್ಭದಲ್ಲಿ ನಮ್ಮ ಸಂಖ್ಯೆ ಹದಿನೈದು ನೂರಾಗಿತ್ತು ಅಷ್ಟೆ ಆದರೆ ನಮ್ಮ ಸಂಖ್ಯೆ ಒಂದು ಲಕ್ಷದಷ್ಟು ಇದ್ದರು ಕೂಡ ಆ ನೀರು ನಮಗೆ ಸಾಕಾಗುತ್ತಿತ್ತು.

(ಸೀರತ್ ಅಲ್‌ಹಲಬೀಯಾ, ಸಂಪುಟ-3, ಪಉಟ-14, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರು ಈ ಘಟನೆಯನ್ನು ಇತಿಹಾಸ ಪುಸ್ತಕಗಳಿಂದ ಈ ರೀತಿ ವಿವರಿಸಿದ್ದಾರೆ:

"ಪ್ರಯಾಣದ ಸಮಯದಲ್ಲಿ... ಹಝ್ರತ್ ಪೈಗಂಬರ್(ಸ) ಬಳಸುತ್ತಿದ್ದ ಪಾತ್ರೆಯನ್ನು ಹೊರತುಪಡಿಸಿ ಯವುದೇ ಪಾತ್ರೆಯಲ್ಲಿ ನೀರಿಲ್ಲ ಸ್ಥಿತಿಯಿತ್ತು. ಆ ಸಂದರ್ಭದಲ್ಲಿ, ಸಹಾಬಗಳು ನೀರಿನ ಬಗ್ಗೆ ದೂರು ನೀಡಿದಾಗ, ಹಝ್ರತ್ ಪೈಗಂಬರ್(ಸ)ರು ತಮ್ಮ ಪಾತ್ರೆಯ ಬಾಯಿಯ ಮೇಲೆ ತಮ್ಮ ಅನುಗ್ರಹದಾಯಕ ಹಸ್ತವನ್ನು ಇರಿಸಿ ಪಾತ್ರೆಯ ಬಾಯಿಯನ್ನು ಬಾಗಿಸಿ ಸಹಾಬಗಳಿಗೆ ಹೇಳಿದರು: ಈಗ ನಿವು ನಿಮ್ಮ ಸ್ವಂತ ಪಾತ್ರೆಗಳನ್ನು ತಂದು ಅವುಗಳನ್ನು ತುಂಬಿರಿ. ವರದಿಗಾರರು ಹೇಳುತ್ತಾರೆ: ಆ ಸಮಯದಲ್ಲಿ ಹಝ್ರತ್ ಪೈಗಂಬರ್(ಸ)ರ ಬೆರಳುಗಳ ಒಳಗಿನಿಂದ ಚಿಲುಮೆ ಹರಿಯುತ್ತಿದ್ದಂತೆ ನೀರು ಚಿಮ್ಮುತ್ತಿತ್ತು. ಹೀಗೆ ಪ್ರತಿಯೊಬ್ಬರೂ ತಮ್ಮ ಅಗತ್ಯಕ್ಕೆ ಅನುಗುಣವಾಗಿ ನೀರನ್ನು ತೆಗೆದುಕೊಂಡರು ಮತ್ತು ಮುಸ್ಲಿಮರ ಸಂಕಟ ದೂರವಾಯಿತು. (ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್‌ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಎಂ.ಎ, ಪುಟ-751)

ಹಝ್ರತ್ ಮಸೀಹ್ ಮೌಊದ್(ಅ) ಅದ್ಬುತ ದೃಷ್ಟಾಂತಗಳಿಗೆ ಸಂಬಂಧಿಸಿ ಹೇಳುತ್ತಾರೆ: ಲಿಖಾ ಎಂಬ ಪದವಿಗೆ ತಲಪುವಾಗ ಮನುಷ್ಯನಿಂದ ಮಾನುಷಿಕ ಶಕ್ತಿಗಳಿಗೆ ಮೀರಿದ ಕಾರ್ಯಗಳು ಕೆಲವೊಮ್ಮೆ ನಡೆಯುತ್ತವೆ. ಅವು ದೈವಿಕ ಶಕ್ತಿಗಳ ವಿಧವನ್ನು ತನ್ನೊಳಗೆ ಇರಿಸಿರುತ್ತವೆ........ ತನ್ನ ವೈಯಕ್ತಿಕ ಶಕ್ತಿಯಿಂದ ಅನೇಕ ಅದ್ಭುತ ದೃಷ್ಟಾಂತಗಳನ್ನು ಹಝ್ರತ್ ಪೈಗಂಬರ್(ಸ) ತೋರಿಸಿದ್ದರು. ಅವುಗಳ ಜೊತೆಗೆ ಯಾವುದೇ ದುಆ ಇದ್ದಿರಲಿಲ್ಲ. ಅನೇಕ ಬಾರಿ ಒಂದು ಚಿಕ್ಕ ಬಟ್ಟಲಿನಲ್ಲಿದ್ದ ಸ್ವಲ್ಪ ನೀರಲ್ಲಿ ತಮ್ಮ ಬೆರಳುಗಳನ್ನು ಹಾಕಿ ಅದನ್ನು ಎಷ್ಟರ ಮಟ್ಟಿಗೆ ಹೆಚ್ಚಿಸಿದರು ಎಂದರೆ ಅದನ್ನು ಇಡೀ ಸೈನ್ಯ, ಒಂಟೆಗಳು ಮತ್ತು ಕುದುರೆಗಳು ಕುಡಿದವು. ಆದರೂ ಆ ನೀರಿನ ಮಟ್ಟದಲ್ಲಿ ಕೊರತೆಯಾಗಲಿಲ್ಲ ಮತ್ತು ಅನೇಕ ಬಾರಿ ಎರಡು ಮೂರು ರೊಟ್ಟಿಗಳ ಮೇಲೆ ತಮ್ಮ ಕೈಯನ್ನಿರಿಸಿದ್ದರಿಂದ ಹಸಿವಿನಿಂದ ಬಳಲುತ್ತಿದ್ದ ಸಾವಿರಾರು ಜನರ ಹೊಟ್ಟೆ ತುಂಬಿಸಿದರು, ಕೆಲವೊಮ್ಮೆ ತುಟಿಯಿಂದ ಅಲ್ಪ ಪ್ರಮಾಣದ ಹಾಲನ್ನು ಅನುಗ್ರಹಿಸಿ ಒಂದು ಜಮಾಅತ್ತಿನ ಹೊಟ್ಟೆ ತುಂಬಿಸಿದರು, ಮತ್ತು ಕೆಲವೊಮ್ಮೆ ಅವರ ಬಾಯಿಯ ಜೊಲ್ಲು ಗದ್ದಲದ ಬಾವಿಯಲ್ಲಿ ಹಾಕಿ ಅದನ್ನು ತುಂಬಾ ಸಿಹಿಯನ್ನಾಗಿ ಮಾಡಿದರು. ಮತ್ತು ಕೆಲವೊಮ್ಮೆ ಅವರು ತಮ್ಮ ಕೈಗಳನ್ನು ಹುಣ್ಣುಗಳ ಮೇಲೆ ಇರಿಸಿ ಅವುಗಳನ್ನು ವಾಸಿಮಾಡಿದರು. ಮತ್ತು ಕೆಲವೊಮ್ಮೆ, ಅವರ ಕೈಯ ಅನುಗ್ರಹದೊಂದಿಗೆ, ಅವರು ಯುದ್ಧದ ಆಘಾತದಿಂದ ಕಣ್ಣುಗುಡ್ಡೆ ಹೊರಬಿದ್ದಾಗ ಆ ಕಣ್ಣುಗಳನ್ನು ಸರಿಪಡಿಸಿದರು. ಹೀಗೆಯೇ ಅವರು ತಮ್ಮ ವೈಯಕ್ತಿಕ ಅಧಿಕಾರದಿಂದ ಅನೇಕ ಇತರ ಕೆಲಸಗಳನ್ನು ಮಾಡಿದರು, ಅದರೊಂದಿಗೆ ರಹಸ್ಯವಾದ ದೈವಿಕ ಶಕ್ತಿಯು ಬೆರೆತಿತ್ತು."

(ಆಯಿನಾ ಕಮಾಲಾತೆ ಇಸ್ಲಾಮ್, ರೂಹಾನಿ ಖಝಾಇನ್, ಸಂಪುಟ-65-66)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹಝ್ರತ್ ಪೈಗಂಬರ್(ಸ)ರ ಪವಾಡಗಳ ವಿಷಯದಲ್ಲಿ ಈ ಮಾತುಗಳನ್ನು ಉಲ್ಲೇಖಿಸಿದ್ದಾರೆ.

ಹಝ್ರತ್ ಪೈಗಮರ್(ಸ) ಅವರ ಯಾತ್ರಯ ಸುದ್ದಿಯ ಮೇಲೆ ಖುರೈಷಿಗಳ ಸೈನ್ಯವನ್ನು ಸಿದ್ಧಪಡಿಸುವುದು ಮತ್ತು ಹಝ್ರತ್ ಪೈಗಂಬರ್(ಸ)ರು ಸಹಾಬಗಳನ್ನು ಸಮಾಲೋಚಿಸುವ ಉಲ್ಲೇಖವೂ ಇದೆ. ಮುಸ್ಲಿಮರು ಯುದ್ಧದ ಉದ್ದೇಶದಿಂದ ಅಲ್ಲ, ಬದಲಾಗಿ ಕಅ್‌ಬ ಭವನವನ್ನು ಸಂದರ್ಶಿಸುವ ಉದ್ದೇಶದಿಂದ ಮಕ್ಕಾಗೆ ಬರುತ್ತಿದ್ದಾರೆ ಎಂದು ಖುರೈಶಿಗಳಿಗೆ ಗೊತ್ತಾಯಿತು. ಆದರೂ ಮುಸ್ಲಿಮರನ್ನು ಮಕ್ಕಾಗೆ ಪ್ರವೇಶಿಸುವುದರಿಂದ ತಡೆಯಲು ಅವರು ನಿರ್ಧರಿಸಿದರು. ಮತ್ತು ಖಡ್ಗವನ್ನು ಹಿಡಿದುಕೊಳ್ಳುವ ಎಲ್ಲರೂ ಮುಸ್ಲಿಮರನ್ನು ತಡೆಯಲು ಬಂದರು. ಹೀಗಿದ್ದರೂ ಅವರು ಯುದ್ಧಕ್ಕೆ ಬರುತ್ತಿಲ್ಲವೆಂದು ಅವರಿಗೆ ತಿಳಿದಿತ್ತು ಆದರೂ ಅವರು ತಮ್ಮ ಮಿತ್ರರನ್ನು ಒಟ್ಟುಗೂಡಿಸಿ ಎಂಟು ಸಾವಿರ ಸೈನ್ಯವನ್ನು ಸಿದ್ಧಪಡಿಸಿ ಮಕ್ಕಾದ ಪಶ್ಚಿಮ ಭಾಗದಲ್ಲಿರುವ ಬಲ್ದಾ ಕಣಿವೆಯಲ್ಲಿ ತಂಗಿದರು. ಮತ್ತು ಖಾಲಿದ್ ಬಿನ್ ವಲೀದ್‌ಗೆ ಇನ್ನೂರು ಸವಾರರೊಂದಿಗೆ ಹಝ್ರತ್ ಪೈಗಂಬರ್(ಸ) ಮತ್ತು ಅವರ ಸಹಾಬಗಳನ್ನು ತಡೆಯಲು ಉಸ್‌ಫಾನ್‌ನಿಂದ ಎಂಟು ಮೈಲಿ ದೂರದಲ್ಲಿರುವ **ಕುರಾಉಲ್ ಗ್ರಮೀಮ್** ಕಣಿವೆಗೆ ಕಳುಹಿಸಿದರು.

(ಸುಲಹ್ ಹುದೈಬಿಯಾ, ಬಾಶ್ಮಿಲ್, ಪುಟ-114-119, ನಫೀಸ್ ಅಕಾಡಮಿ) (ಫರ್ಹಂಗ್ ಸೀರತ್, ಪುಟ-61, 243)

ಹಝ್ರತ್ ಮಿಸ್ವರ್ ಬಿನ್ ಮಖ್ರಮಾ ಮತ್ತು ಮರ್ವಾನ್ ಬಿನ್ ಹಕಮ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಉಸ್‌ಫಾನ್ ಬಳಿಯ ಅಷ್ತಾತ್‌ನ ಕೊಳಕ್ಕೆ ತಲುಪಿದಾಗ ಹಝ್ರತ್ ಪೈಗಂಬರ್(ಸ)ರ ಸುದ್ದಿಗಾರ ನಿಮ್ಮ ಬಳಿ ತಲುಪಿ ಹೇಳಿದನು: ಖುರೈಷಿಗಳು ನಿಮಗಾಗಿ ಒಂದು ದೊಡ್ಡ ಸೈನ್ಯವನ್ನು ಸಂಗ್ರಹಿಸಿದ್ದಾರೆ ಮತ್ತು ನಿಮಗಾಗಿ ವಿವಿಧ ಗೋತ್ರಗಳನ್ನು ಒಟ್ಟುಗೂಡಿಸಿದ್ದಾರೆ ಮತ್ತು ಅವರು ನಿಮ್ಮೊಂದಿಗೆ ಹೋರಾಡಲು ಮತ್ತು ಬೈತುಲ್ಲಾಹ್‌ನಿಂದ (ಕಅ್‌ಬ ಭವನ) ನಿಮ್ಮನ್ನು ತಡೆಯಲು ಹೊರಟಿದ್ದಾರೆ. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು: ಓ ಜನರೇ! ನನಗೆ ಸಲಹೆ ನಿಡಿ. ಬೈತುಲ್ಲಾಹ್‌ನಿಂದ (ಕಅ್‌ಬ ಭವನ) ನಮ್ಮನ್ನು ತಡೆಯಲು ಬಯಸುವವರನ್ನು ನಾನು ಅವರ ಕುಟುಂಬ ಮತ್ತು ಮಕ್ಕಳ ಮೇಲೆ ದಾಳಿ ಮಾಡಬೇಕೆ? ಅಥವಾ ಒಂದುವೇಳೆ ಅವರು ನಮ್ಮ ಬಳಿಗೆ ಬಂದರೆ ನಾವು ಅವರನ್ನು ಸೋಲಿಸಿ ಬಿಡುತ್ತೇವೆ. ಹಝ್ರತ್ ಅಬೂಬಕರ್(ರ) ಹೇಳಿದರು, ಯಾ ರಸೂಲಲ್ಲಾಹ್(ಸ)!! ನಿವು ಬೈತುಲ್ಲಾಹ್‌ಗಾಗಿ (ಕಅ್‌ಬ ಭವನ) ನಿರ್ಧರಿಸಿ ಹೊರಟಿದ್ದೀರಿ, ನೀವು(ಸ) ಯಾರನ್ನೂ ಕೊಲ್ಲುವ ಉದ್ದೇಶವನ್ನು ಹೊಂದಿಲ್ಲ ಮತ್ತು ಯಾರೊಂದಿಗೂ ಹೋರಾಡುವ ಉದ್ದೇಶವನ್ನು ಹೊಂದಿಲ್ಲ. ಆದ್ದರಿಂದ ನೀವು ಆ ಮನೆಯ (ಕಅ್‌ಬ ಭವನ) ಕಡೆಗೆ ಹೋಗಿ. ಇದರಿಂದ ಯಾರು ನಮ್ಮನ್ನು ತಡೆಯುತ್ತಾರೋ, ನಾವು ಅವರೊಂದಿಗೆ ಹೋರಾಡುತ್ತೇವೆ.

(ಬುಖಾರಿ ಕಿತಾಬುಲ್ ಮಘಾಜಿ, ಅಧ್ಯಾಯ ಘಜ್ವಾ ಅಲ್-ಹುದೈಬಿಯಾ, ಹದೀಸ್: 4178-4179)

ಅಂದರೆ ನಾವು ನಮ್ಮ ಕೆಲಸವನ್ನು ಮುಂದುವರಿಸಬೇಕು. ಪ್ರಯಾಣ ಮುಂದುವರೆಯಬೇಕು. ಹಝ್ರತ್ ಉಸೈದ್ ಬಿನ್ ಹುದೈರ್(ರ) ಹಝ್ರತ್ ಅಬೂಬಕರ್(ರ) ಅವರ ಈ ಹೇಳಿಕೆಯನ್ನು ಒಪ್ಪಿದರು. ಹಝ್ರತ್ ಅಬೂಬಕರ್(ರ) ನಂತರ, ಹಝ್ರತ್ ಮಿಕ್ದಾದ್(ರ) ಹೇಳಿದರು: ಅಲ್ಲಾಹನ ಆಣೆ! ಯಾ ರಸೂಲಲ್ಲಾಹ್(ಸ)! ನಾವು ಇಲ್ಲಿ ಕುಳಿತಿರುತ್ತೇವೆ ನೀವು ಮತ್ತು ನಿಮ್ಮ ಕರ್ತನು ಹೋಗಿ ಯುದ್ಧಮಾಡಿ ಎಂದು ಬನೀ ಇಸ್ರಾಈಲ್‌ರು ತಮ್ಮ ಪ್ರವಾದಿ ಮೂಸಾರಿಗೆ ಹೇಳಿದ್ದನ್ನು ನಾವು ನಿಮಗೆ ಹೇಳುವುದಿಲ್ಲ. ಯಾ ರಸೂಲಲ್ಲಾಹ್(ಸ)! ನೀವು ನಡೆಯಿರು ನೀವು ಮತ್ತು ನಿಮ್ಮ ಭಗವಂತನು ಹೋರಾಡಲಿ, ನಾವು ಕುಡ ನಿಮ್ಮೊಂದಿಗೆ ಹೋರಾಡುತ್ತೇವೆ.

(ಸಬ್ಲುಲ್ ಹುದಾ, ಸಂಪುಟ-5, ಪುಟ-37, ದಾರುಲ್ ಕುತುಬ್ ಇಲ್‌ಮಿಯಾ, ಬೈರುತ್)

ಈ ಘಟನೆಯನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ಅವರು ತಮ್ಮದೇ ಆದ ಶೈಲಿಯಲ್ಲಿ ವಿವರಿಸುತ್ತಾ ಹೇಳುತ್ತಾರೆ: "ಮಕ್ಕಾದ ಜನರಿಗೆ ಅದಿರ ಬಗ್ಗೆ ಅರಿವಾದಾಗ ಅವರು ಸೈನ್ಯದೊಂದಿಗೆ ಬಂದು ಮುಸ್ಲಿಮರಿಗೆ ಹೇಳಿದರು: ಇಲ್ಲಿಗೆ ಬರಲು ನಿಮಗೆ ಯಾರು ಅನುಮತಿ ನೀಡಿರುವರು? ಅದಕ್ಕೆ ಅವರು ಹೇಳಿದರು,  ನಾವು ಯುದ್ಧವಾಡಕ್ಕೆ ಬಂದಿರುವುದಲ್ಲ ಉಮ್ರಾ ಅನುಷ್ಠಿಸುಲು ಮಾತ್ರ ಬಂದಿರುವೆವು. ಈ ಸ್ಥಳವು ನಿಮಗೂ ಮತ್ತು ನಮದೂ ಪವಿತ್ರವಾಗಿದೆ. ನಾವು ತೀರ್ಥಯಾತ್ರೆ ಮಾತ್ರ ಬಂದಿರುವೆವು. ಯುದ್ಧವಾಡಕ್ಕೆ ಬಂದಿಲ್ಲ. ಅದಕ್ಕೆ ಅವರು ಹೇಳಿದರು ತವಾಫ್ ಮಾಡುವ ಪ್ರಶ್ನೆಯೇ ಇಲ್ಲ." ಸತ್ಯನಿಷೇಧಿಗಳು ನಿರಾಕರಿಸಿದರು. "ನಮ್ಮ ಮತ್ತು ನಿಮ್ಮ ನಡುವೆ ಹೋರಾಡವಿದೆ. ನೀವು ಮಕ್ಕಾಗೆ ಬಂದು ತವಾಫ್ ಮಾಡಿ ಹೋದರೆ, ನಿಮ್ಮ ಶತ್ರು ಬಂದು ನಿಮ್ಮ ಮನೆಯಲ್ಲಿ ತವಾಫ್ ಮಾಡಿದ್ದಾನೆ ಎಂದು ನಮ್ಮ ಮೂಗುಗಳನ್ನು ಇಡೀ ಅರೇಬಿಯಾದಲ್ಲಿ ಕತ್ತರಿಸಲಾಗುತ್ತದೆ. ನಾವು ಇಡೀ ಅರಬ್ ಜಗತ್ತಿಗೆ ಅನುಮತಿ ನೀಡಬಹುದು, ಆದರೆ ನಿಮಗೆ ಅನುಮತಿ ನೀಡಲು ಸಾಧ್ಯವಿಲ್ಲ." (ಸೈರೆ ರೂಹಾನಿ, ಅನ್ವಾರುಲ್ ಉಲೂಮ್, ಸಂಪುಟ-24, ಪುಟ-247)

ಮೊದಲೇ ಹೇಳಿದಂತೆ, ಖಾಲಿದ್ ಬಿನ್ ವಲೀದ್ ಇನ್ನೂರು ಸೈನ್ಯದೊಂದಿಗೆ ಹಝ್ರತ್ ಪೈಗಂಬರ್(ಸ.ಅ) ರ ಗುಂಪನ್ನು ತಡೆಯಲು ಮತ್ತು ಹಝ್ರತ್ ಪೈಗಂಬರ್(ಸ.ಅ) ಅವರಿಗಾಗಿ ಮುಂದೆ ಬಂದರು. ಹಝ್ರತ್ ಪೈಗಂಬರ್(ಸ) ಅವರಿಗೆ ಈ ಸುದ್ದಿ ಲಭಿಸಿದಾಗ ಹಝ್ರತ್ ಪೈಗಂಬರ್(ಸ)ರು ಖಾಲಿದ್ ಬಿನ್ ವಲೀದ್ ಅವರಿಂದ ದೂರ ಸರಿದು, ಅವರ ಮಾರ್ಗವನ್ನು ಬಿಟ್ಟು ಮತ್ತೊಂದು ಮಾರ್ಗವಾಗಿ ಹುದೈಬಿಯಾಗೆ

ತಲುಪಿದರು. ಅದರ ವಿವರಣೆಯಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ) ಬರೆದಿದ್ದಾರೆ "ಹಝ್ರತ್ ಪೈಗಂಬರ್(ಸ)ರು ಕೆಲವು ದಿನಗಳ ಪ್ರಯಾಣದ ನಂತರ, ಅವರು ಮೆಕ್ಕಾದಿಂದ ಎರಡು ರಸ್ತೆಯಲ್ಲಿರುವ ಉಸ್‌ಫಾನ್ ಬಳಿ ತಲುಪಿದ ನಂತರ ಹಝ್ರತ್ ಪೈಗಂಬರ್(ಸ)ರ ಸುದ್ದಿಗಾರರು ಹಿಂದಿರುಗಿ ಬಂದು ಹೇಳಿದರು: ಮೆಕ್ಕಾದ ಖುರೈಷಿಗಳು ಬಹಳ ಉತ್ಸಾಹದಲ್ಲಿದ್ದಾರೆ ಮತ್ತು ನಿಮ್ಮನ್ನು ತಡೆಯಲು ದೃಢ ನಿರ್ಧಾರ ಕೈಗೊಂಡಿದ್ದಾರೆ. ಅವರಲ್ಲಿ ಕೆಲವರು ಚಿರತೆಯ ಚರ್ಮವನ್ನು ತಮ್ಮ ಉತ್ಸಾಹ ಮತ್ತು ಭಯವನ್ನು ತೋರಿಸಲು ಧರಿಸಿದ್ದಾರೆ ಮತ್ತು ಹೇಗಾದರೂ ಮುಸ್ಲಿಮರ ವಿರುದ್ಧ ಹೋರಾಡಲು ಮತ್ತು ಅವರನ್ನು ತಡೆಯಲು ನಿರ್ಧರಿಸಿದ್ದಾರೆ. ಖುರೈಷಿಗಳು ಇನ್ನೂ ಮುಸ್ಲಿಮರಾಗದ ಖಾಲಿದ್ ಬಿನ್ ವಲೀದ್ ಅವರ ನೇತೃತ್ವದಲ್ಲಿ ತಮ್ಮ ಕೆಲವು ಅನುಭವಿ ಕುದುರೆ ಸವಾರರ ತುಕಡಿಯನ್ನು ಕಳುಹಿಸಿದ್ದರು ಎಂದು ತಿಳಿದುಬಂದಿದೆ. ಮತ್ತು ಈ ಪಡೆ ಈ ಸಮಯದಲ್ಲಿ ಮುಸ್ಲಿಮರ ಹತ್ತಿರ ಬಂದಿದೆ ಮತ್ತು ಈ ಪಡೆ ಇಕ್ರಮಾ ಬಿನ್ ಅಬು ಜಹಲ್ ಮತ್ತು ಮುಂತಾದವರನ್ನು ಒಳಗೊಂಡಿದೆ. ಈ ಸುದ್ದಿಯನ್ನು ಕೇಳಿದ ತಕ್ಷಣ ಹಝ್ರತ್ ಪೈಗಂಬರ್(ಸ) ಅವರು ಘರ್ಷಣೆಯನ್ನು ತಪ್ಪಿಸುವ ಸಲುವಾಗಿ ಮಕ್ಕಾದ ಪ್ರಸಿದ್ಧ ರಸ್ತೆಯನ್ನು ಬಿಟ್ಟು ಬಲಭಾಗದಲ್ಲಿ ಮುನ್ನಡೆಯಲು ಸಹಾಬಿಗಳಿಗೆ ಆದೇಶಿಸಿದರು. ಹೀಗೆ ಮುಸ್ಲಿಮರು ಕಠಿಣ ಮತ್ತು ಕಷ್ಟಕರವಾದ ಹಾದಿಯಲ್ಲಿ ಸಮುದ್ರದ ಕಡೆಗೆ ಚಲಿಸಲು ಪ್ರಾರಂಭಿಸಿದರು." (ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ-750) ಹಝ್ರತ್ ಪೈಗಂಬರ್(ಸ)ರು ಅವರೊಂದಿಗೆ ಹೋರಾಡಲು ಇಷ್ಟಪಡಲಿಲ್ಲ ಏಕೆಂದರೆ ಅವರು ಯುದ್ಧಕ್ಕೆ ಬಂದಿರಲಿಲ್ಲ ಬದಲಿಗೆ ಉಮ್ರಾ ಅನುಷ್ಠಿಸುವುದಕ್ಕೆ ಬಂದಿದ್ದರು.

ಆದಾಗ್ಯೂ, ಹಝ್ರತ್ ಪೈಗಂಬರ್(ಸ)ರು ಅಲ್ಲಿಂದ ಹೊರಟು ತಮ್ಮ ಸ್ಥಳಕ್ಕೆ ತಲುಪಿದರು. ಖಾಲಿದ್ ಬಿನ್ ವಲೀದ್ ಅವರಿಗೆ ಮುಸ್ಲಿಮರು ತಮ್ಮ ಮಾರ್ಗವನ್ನು ಬದಲಾಯಿಸಿದ್ದಾರೆಂದು ತಿಳಿದಿರಲಿಲ್ಲ. ಖಾಲಿದ್ ಬಿನ್ ವಲೀದ್ ಇಸ್ಲಾಮಿನ ಸೇನೆಯ ಧೂಳನ್ನು ಕಂಡಾಗ ಖುರೈಷಿಗಳಿಗೆ ಎಚ್ಚರಿಕೆ ನೀಡಲು ಓಡಿ ಹೋದರು. (ಸಬ್ಲುಲ್ ಹುದಾ ವರ್ರಶಾದ್, ಸಂಪುಟ-5, ಪುಟ-38 ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಸುಲಹ್ ಹುದೈಬಿಯಾ, ಬಾಶ್ಮಿಲ್, ಪುಟ-125, ನಫೀಸ್ ಅಕಾಡಮಿ)

ಹಝ್ರತ್ ಪೈಗಂಬರ್(ಸ)ರು ಹುದೈಬಿಯಾಗೆ ಬಂದು ಇಳಿದರು ಎಂಬುದರ ಬಗ್ಗೆ ಹದೀಸಿನಲ್ಲಿ ಹೀಗೆ ವರದಿಯಾಗಿದೆ. ಹಝ್ರತ್ ಮಿಸ್ವರ್ ಬಿನ್ ಮಖ್ರಮಹ್(ರ) ಮತ್ತು ಮರ್ವಾನ್ ವರದಿ ಮಾಡುತ್ತಾರೆ ಅವರು ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರು ಹುದೈಬಿಯಾ ಎಂಬ ಸ್ಥಳಕ್ಕೆ ತಲುಪಿದರು. ಹುದೈಬಿಯ ಕಣಿವೆಗೆ ತಲುಪಿದಾಗ ಹಝ್ರತ್ ಪೈಗಂಬರ್(ಸ)ರ ಒಂಟೆಯಾದ ಖಸ್ವ ಕುಳಿತುಕೊಂಡಿತು. ಅದನ್ನು ಎಬ್ಬಿಸಲು ಪ್ರಯತ್ನಿಸಲಾದರೂ ಅದು ಮುಂದಕ್ಕೆ ಹೋಗಲಿಲ್ಲ. ಖಸ್ವ ಹಠವಾಡುತ್ತಿದೆ ಎಂದು ಜನರು ಹೇಳಿಕೊಂಡರು. ಹಝ್ರತ್ ಪೈಗಂಬರ್(ಸ) ಹೇಳಿದರು: ಖಸ್ವ ಹಠ ಮಾಡುತ್ತಿಲ್ಲ, ಅದಕ್ಕೆ ಹಠ ಹಿಡಿಯುವ ಅಭ್ಯಾಸವೂ ಇಲ್ಲ. ಸತ್ಯದಲ್ಲಿ ಆನೆಗಳನ್ನು ತಡೆಯುವ ಪರಿಶುದ್ಧ ದೇವನಾದ ಅಲ್ಲಾಹನು ಅದನ್ನು ತಡೆದಿರುವನು. ಯಾರ ಕೈಯಲ್ಲಿ ನನ್ನ ಜೀವವಿದೆಯೋ ಆ ಅಲ್ಲಾಹನ ಆಣೆ! ಅಲ್ಲಾಹನ ಪರಿಶುದ್ಧ ಸ್ಥಳಗಳ ಗೌರವವನ್ನು ಉದ್ದೇಶಿಸಿ ಖುರೈಶಿಯರು ಏನು ಅವಶ್ಯಪಟ್ಟರೂ ನಾನು ಖಂಡಿತವಾಗಿಯೂ ನೀಡುವೆನು. ಅನಂತರ ಹಝ್ರತ್ ಪೈಗಂಬರ್(ಸ) ಒಂಟೆಯನ್ನು ಸ್ವಲ್ಪ ಗದರಿಸಿದಾಗ ಅದು ಎದ್ದು ನಿಂತಿತು. ಹುದೈಬಿಯದ ಬಳಿ ಸ್ವಲ್ಪ ನೀರು ಇರುವ ಒಂದು ಕೊಳದ ಸಮೀಪ ಮುಸ್ಲಿಮರು ತಂಗಿದರು. ಇದು ಬುಖಾರಿಯ ವರದಿಯಾಗಿದೆ. (ಬುಖಾರಿ ಕಿತಾಬುಶ್ಶುರೂತ್, ಅಧ್ಯಾಯ ಅಶ್ಶುರೂತು ಫಿಲ್‌ಜಿಹಾದಿ, ಹದೀಸ್-2731-2732)

ಹಝ್ರತ್ ಮುಸ್ಲೆಹ್ ಮೌಊದ್(ರ) ಹೇಳುತ್ತಾರೆ, "ಇಲ್ಲಿ ನಿಮ್ಮ ಒಂಟೆ ನಿಂತುಕೊಂಡಿತು ಮತ್ತು ಅದು ಮುಂದೆ ಹೋಗಲು ನಿರಾಕರಿಸಿತು. ಸಹಾಬಗಳು ಹೇಳಿದರು ಯಾ ರಸೂಲಲ್ಲಾಹ್(ಸ)!! ನಿಮ್ಮ ಒಂಟೆ ದಣಿದಿದೆ, ನೀವು ಅದನ್ನು ಬಿಟ್ಟು ಇನ್ನೊಂದು ಒಂಟೆಯ ಮೇಲೆ ಕುಳಿತುಕೊಳ್ಳಿರಿ. ಆದರೆ ಹುದೈಬಿಯದ ಬಳಿ ಸ್ವಲ್ಪ ನೀರು ಇರುವ ಒಂದು ಕೊಳದ ಸಮೀಪ ಮುಸ್ಲಿಮರು ತಂಗಿದರು.ರು ಹೇಳಿದರು. ಇಲ್ಲ, ಇಲ್ಲ, ಇದು ದಣಿದಿಲ್ಲ, ಬದಲಿಗೆ ಸರ್ವಶಕ್ತನಾದ ಅಲ್ಲಾಹನ ಉದ್ದೇಶವು ನಾವು ಇಲ್ಲಿಯೇ ತಂಗಬೇಕು ಎಂದಾಗಿದೆ ಆದ್ದರಿಂದ ನಾನು ಇಲ್ಲಿಯೇ ಇದ್ದು ಹಜ್ಜ್ ಅನುಷ್ಠಿಸಲು ಅನುಮತಿ ನೀಡುವಂತೆ ಮಕ್ಕಾದ ಜನರಲ್ಲಿ ವಿನಂತಿಸುತ್ತೇನೆ ಮತ್ತು ಅವರು ಯಾವುದೇ ಷರತ್ತು ವಿಧಿಸಿದರೂ, ನಾನು ಅದನ್ನು ಅನುಮೋದಿಸುತ್ತೇನೆ. ಈ ವೇಳೆಗಾಗಲೇ ಮೆಕ್ಕಾದ ಸೇನೆಯು ಮೆಕ್ಕಾದಿಂದ ಸ್ವಲ್ಪ ದೂರದಲ್ಲಿ ಬೀಡುಬಿಟ್ಟು ಮುಸ್ಲಿಮರಿಗಾಗಿ ಕಾಯುತ್ತಿತ್ತು.

ಹಝ್ರತ್ ಪೈಗಂಬರ್(ಸ)ರು ಬಯಸಿದ್ದರೆ ಅವರು ಯುದ್ಧವಿಲ್ಲದೆ ಮಕ್ಕಾವನ್ನು ಪ್ರವೇಶಿಸಬಹುದಿತ್ತು, ಆದರೆ ಹಝ್ರತ್ ಪೈಗಂಬರ್(ಸ)ರು ಈಗಾಗಲೇ ನಿರ್ಧರಿಸಿದ್ದರಿಂದ ಅವರು(ಸ)ರು ಮೊದಲು ಮಕ್ಕಾದ ಜನರ ಅನುಮತಿಯೊಂದಿಗೆ ತವಾಫ್ ಮಾಡಲು ಪ್ರಯತ್ನಿಸುತ್ತಾರೆ ಮತ್ತು ಮಕ್ಕಾದ ಜನರು ಸ್ವತಃ ಯುದ್ಧವಾಡಲು ಹೋರಾಟವನ್ನು ಪ್ರಾರಂಭಿಸಿದರೆ ಹೋರಾಡುತ್ತಾರೆ. ಆದ್ದರಿಂದ, ಮಕ್ಕಾಗೆ ಹೋಗುವ ಮಾರ್ಗವು ತೆರೆದಿದ್ದರೂ, ಅವರು ಹುದೈಬಿಯಾದಲ್ಲಿ ಬಿಡಾರ ಹೂಡಿದರು."
(ದೀಬಾಚ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ-20, ಪುಟ-306-307)

ಬುಖಾರಿಯಲ್ಲಿ ಹೀಗೆ ವರದಿಯಾಗಿದೆ: ಹುದೈಬಿಯದ ಬಳಿ ಸ್ವಲ್ಪ ನೀರು ಇರುವ ಒಂದು ಕೊಳದ ಸಮೀಪ ಮುಸ್ಲಿಮರು ತಂಗಿದರು. ಜನರು ಕೊಳದಿಂದ ನೀರು ತೆಗೆಯಲು ತೊಡಗಿದರು. ಅದು ಸ್ವಲ್ಪ ಸಮಯದಲ್ಲೇ ಬತ್ತಿ ಹೋಯಿತು. ಆದ್ದರಿಂದ ಜನರು ತಮ್ಮ ಬಾಯಾರಿಕೆಯ ಬಗ್ಗೆ ಹಝ್ರತ್ ಪೈಗಂಬರ್(ಸ) ಅವರಲ್ಲಿ ದೂರಿದರು.
(ಬುಖಾರಿ ಕಿತಾಬುಲ್-ಶುರೂತ್ ಫಿಲ್‌ಜಿಹಾದ್, ಹದೀಸ್-2731-2732)

ಹಝ್ರತ್ ನಾಜಿಯಾ ಬಿನ್ ಅಲ್‌ಜಮ್(ರ) ವರದಿ ಮಾಡುತ್ತಾರೆ, ನೀರಿನ ಕೊರತೆಯ ದೂರು ಮುಟ್ಟಿದಾಗ ಹಝ್ರತ್ ಪೈಗಂಬರ್(ಸ) ನನ್ನನ್ನು ಕರೆದರು. ತನ್ನ ಬತ್ತಳಿಕೆಯಿಂದ ಒಂದು ಬಾಣವನ್ನು ತೆಗೆದು ನನಗೆ ಕೊಟ್ಟರು. ಅನಂತರ ಚಿಲುಮೆಯ ಸ್ವಲ್ಪ ನೀರನ್ನು ಒಂದು ತೊಟ್ಟಿಯಲ್ಲಿ ಪಡಕೊಂಡರು. ಹಝ್ರತ್ ಪೈಗಂಬರ್(ಸ) ವುಝೂ ಮಾಡಿ ಬಾಯಿ ಮುಕ್ಕಳಿಸಿ ತೊಟ್ಟಿಗೆ ಹಾಕಿದರು. ಅನಂತರ ಹೀಗೆ ಹೇಳಿದರು: ಇದನ್ನು ಒಣಗಿದ ಕೊಳಕ್ಕೆ ಹಾಕು ಮತ್ತು ಅದರ ನೀರಿಗೆ ಈ ಬಾಣವನ್ನು ಹೂತು ಹಾಕು. ನಾನು ಹಾಗೆಯೇ ಮಾಡಿದೆ. ಹಝ್ರತ್ ಪೈಗಂಬರ್(ಸ)ರನ್ನು ಸತ್ಯದೊಂದಿಗೆ ಕಳುಹಿಸಿದ ಆ ಅಲ್ಲಾಹನ ಆಣೆ, ನಾನು ಬಹಳ ಶ್ರಮಪಟ್ಟು ಆ ಕೊಳದಿಂದ ಹೊರಗೆ ಬರಬೇಕಾಗಿ ಬಂತು. ನೀರು ನನ್ನನ್ನು ಎಲ್ಲ ಕಡೆಯಿಂದಲೂ ಸುತ್ತುವರೆದಿತ್ತು. ಪಾತ್ರೆಯಲ್ಲಿ ನೀರು ಕುದಿಯುವ ಹಾಗೆ ನೀರು ಚಿಮ್ಮುತ್ತಿತ್ತು. ಕೊನೆಗೆ ನೀರು ಮೇಲಕ್ಕೆ ಏರಿತು ಮತ್ತು ದಡದ ತನಕ ತಲುಪಿತು. ಜನರು ಅದರ ಅಂಚುಗಳಿಂದ ನೀರು ತುಂಬಿಸುತ್ತಿದ್ದರು. ಎಷ್ಟೆಂದರೆ ಅವರಲ್ಲಿ ಕೊನೆಯ ವ್ಯಕ್ತಿ ಕೂಡ ತನ್ನ ಬಾಯಾರಿಕೆಯನ್ನು ನೀಗಿಸಿದನು. (ಸಬ್ಲುಲ್ ಹುದಾ, ಸಂಪುಟ-5, ಪುಟ-41, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಈ ವೇಳೆಯ ಒಂದು ಮಳೆಯ ಬಗ್ಗೆಯೂ ಹೀಗೆ ಪ್ರಸ್ತಾಪಿಸಿರುವರು. ಇದು ಕೂಡ ಇತಿಹಾಸದ ಗ್ರಂಥಗಳಲ್ಲಿ ಉಲ್ಲೇಖಿಸಲಾಗಿದೆ. "ಅದೇ ರಾತ್ರಿ ಮಳೆಯೂ ಬಂತು. ಫಜ್ರ್ ನಮಾಝಿಗಾಗಿ ಹಝ್ರತ್ ಪೈಗಂಬರ್(ಸ) ಬಂದಾಗ ಮೈದಾನವು ನೀರಿನಿಂದ ತುಂಬಿತ್ತು. ಹಝ್ರತ್ ಪೈಗಂಬರ್(ಸ) ಸಹಾಬಿಯರೊಡನೆ ಮುಗುಳ್ನಗುತ್ತಾ ಹೀಗೆ ಹೇಳಿದರು: ಈ ಮಳೆಯ ವೇಳೆ ನಿಮ್ಮ ಪ್ರಭು ಯಾವ ಆದೇಶ ನೀಡಿರುವನು ಎಂದು ನಿಮಗೆ ಗೊತ್ತಿದೆಯೇ? ಅಲ್ಲಾಹನು ಮತ್ತು ಅವನ ಪ್ರವಾದಿಯೇ ಹೆಚ್ಚು ಬಲ್ಲರು ಎಂದು ಸಹಾಬಿಯರು ರೂಢಿಯಂತೆ ಹೇಳಿದರು. ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು:

"ಅಲ್ಲಾಹನು ಹೇಳುತ್ತಾನೆ - ನನ್ನ ದಾಸರಲ್ಲಿ ಕೆಲವರು ಇಂದಿನ ಬೆಳಿಗ್ಗೆಯನ್ನು ನಿಜವಾದ ಸತ್ಯವಿಶ್ವಾಸದೊಂದಿಗೆ ಕಳೆದಿರುವರು. ಆದರೆ ಕೆಲವರು ಸತ್ಯನಿಷೇಧದ ಸ್ಥಿತಿಯಲ್ಲಿ ಚಂಚಲಚಿತ್ತರಾದರು. ಅದು ಹೇಗೆಂದರೆ, ಅಲ್ಲಾಹನ ಅನುಗ್ರಹ ಮತ್ತು ಕೃಪೆಯಿಂದ ಮಳೆ ಬಂತು ಎಂದು ಹೇಳಿದವರು ತಮ್ಮ ಸತ್ಯವಿಶ್ವಾಸದಲ್ಲಿ ನೆಲೆನಿಂತರು. ಈ ಮಳೆ ಇಂತಿಂತಹ ನಕ್ಷತ್ರಗಳ ಪ್ರಭಾವದಿಂದ ಬಂದಿತು ಎಂದು ಹೇಳಿದವರು ನಿಸ್ಸಂಶಯವಾಗಿಯೂ ಚಂದ್ರ, ಸೂರ್ಯನ ವಿಶ್ವಾಸಿಯಾದರು. ಅವರು ಅಲ್ಲಾಹನನ್ನು ನಿಷೇಧಿಸಿದರು."

ಏಕದೇವ ವಿಶ್ವಾಸದ ಸಂಪತ್ತಿನಿಂದ ತುಂಬಿರುವ ಹಝ್ರತ್ ಪೈಗಂಬರ್(ಸ) ಈ ಉಪದೇಶದಿಂದ ಸಹಾಬಿಯರಿಗೆ ನೀಡಿದ ಪಾಠವೇನೆಂದರೆ, ನಿಸ್ಸಂಶಯವಾಗಿಯೂ ಕಾರ್ಯ ಕಾರಣಗಳ ಆಧಾರದಲ್ಲಿ ಅಲ್ಲಾಹನು ಈ ಲೋಕದ ಕಾರ್ಯಗಳನ್ನು ನಡೆಸಲು ಅನೇಕ ವಿಧದ ಕಾರಣಗಳನ್ನು ನಿಶ್ಚಯಿಸಿದ್ದಾನೆ. ಮಳೆ ಇತ್ಯಾದಿಗಳ ವಿಷಯದಲ್ಲಿ ಆಕಾಶ ಕಾಯಗಳ ಪ್ರಭಾವವನ್ನು ನಿರಾಕರಿಸಲಾಗದು. ಆದರೆ ನಿಜವಾದ ತೌಹೀದ್ ಅಥವಾ ಏಕದೇವ ವಿಶ್ವಾಸ ಏನೆಂದರೆ, ಮಧ್ಯದಲ್ಲಿ ಕಾಣಲ್ಪಡುವ ಕಾರಣಗಳು ಇದ್ದೂ ಅನೇಕ ಮರೆಗಳ ಹಿಂದೆ ಇರುವ ಅಲ್ಲಾಹನೆಂಬ ಅಸ್ತಿತ್ವವನ್ನು ಮನುಷ್ಯನು ಗಮನಿಸದೇ ಇರಬಾರದು. ಅವನು ಈ ಲೋಕವೆಂಬ ಕಾರ್ಖಾನೆಯ ಮೂಲ ಕಾರಣವಾಗಿದ್ದಾನೆ. ಅವನಿಲ್ಲದೇ ಹೋದರೆ ಬಾಹ್ಯವಾದ ಕಾರಣಗಳಿಗೆ ಒಂದು ಸತ್ತ ಕೀಟಕ್ಕಿಂತ ಹೆಚ್ಚಿನ ಬೆಲೆಯಿಲ್ಲ."

(ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್‌ಝಾದಾ ಮೀರ್ಝಾ ಬಶೀರ್ ಅಹ್ಮದ್ ಸಾಹಿಬರ(ರ) ಎಂ.ಎ, ಪುಟ-751-752)

ಹಝ್ರತ್ ಪೈಗಂಬರ್(ಸ) ಅವರಿಗೆ ಅಮ್ರ್ ಬಿನ್ ಸಾಲಿಮ್ ಮತ್ತು ಬುಸ್ರ್ ಬಿನ್ ಸುಫ್ಯಾನ್ ಅವರ ಉಡುಗೊರೆಯ ಉಲ್ಲೇಖವೂ ಇದೆ. ಖುಝಾಅಹ್ ಗೋತ್ರಕ್ಕೆ ಸೇರಿದ ಅಮ್ರೋ ಬಿನ್ ಸಾಲಿಮ್ ಮತ್ತು ಬುಸ್ರ್ ಬಿನ್ ಸುಫ್ಯಾನ್ ಅವರು ಹುದೈಬಿಯಾ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ)ರಿಗೆ ಆಡು ಮತ್ತು ಒಂಟೆಗಳನ್ನು ಉಡುಗೊರೆಯಾಗಿ ನೀಡಿದರು ಎಂದು ಬರೆಯಲಾಗಿದೆ. ಅಮ್ರೋ ಬಿನ್ ಸಾಲಿಮ್ ಅವರು ಹಝ್ರತ್ ಸಅದ್ ಬಿನ್ ಉಬಾದಾ(ರ) ಅವರಿಗೆ ಒಂಟೆಯನ್ನು ಉಡುಗೊರೆಯಾಗಿ ನೀಡಿದರು. ಹಝ್ರತ್ ಸಅದ್ ಅಮ್ರ್ ಅವರ ಸ್ನೇಹಿತರಾಗಿದ್ದರು. ಹಝ್ರತ್ ಸಅದ್ ಬಿನ್ ಉಬಾದಹ್(ರ) ಅವರು ಈ ಉಡುಗೊರೆಯೊಂದಿಗೆ ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು ಅಮ್ರ್ ಅವರಿಗೆ ಈ ಒಂಟೆಯನ್ನು ಉಡುಗೊರೆಯಾಗಿ ನೀಡಿದ್ದಾರೆ ಎಂದು ತಿಳಿಸಿದರು, ಅದಕ್ಕೆ ಹಝ್ರತ್ ಪೈಗಂಬರ್(ಸ) ಅವರು ಹೇಳಿದರು: ಅಮ್ರ್ ನಮಗೂ ಉಡುಗೊರೆ ನೀಡಿದ್ದಾರೆ. ಸರ್ವಶಕ್ತನಾದ ಅಲ್ಲಾಹನು ಅಮ್ರ್ ಅವರ ಸಂಪತ್ತನ್ನು ಅನುಗ್ರಹಿಸಲಿ. ನಂತರ ಅವರು ಒಂಟೆಗಳನ್ನು ವಧಿಸಿ ಸಹಾಬಿಗಳ ನಡುವೆ ಹಂಚಬೇಕೆಂದು ಆದೇಶಿಸಿದರು ಮತ್ತು ಮೇಕೆಗಳನ್ನು ಅವರ ನಡುವೆ ಹಂಚಲಾಯಿತು. ನಂತರ ಒಂಟೆಯ ಮಾಂಸವನ್ನು ಇತರರಿಗೆ ಕಳುಹಿಸಿದಂತೆ ಹಝ್ರತ್ ಉಮ್ಮು ಸಲಮಾ(ರ) ಅವರಿಗೆ ಕಳುಹಿಸಲಾಯಿತು ಮತ್ತು ಹಝ್ರತ್ ಪೈಗಂಬರ್(ಸ)ರು ಹಝ್ರತ್ ಉಮ್ಮೆ ಸಲಮಾ(ರ) ಅವರಿಗೆ ತಮ್ಮ ಮೇಕೆಯಿಂದ ಸ್ವಲ್ಪ ಮಾಂಸವನ್ನು ನೀಡಿದರು ಮತ್ತು ಆ ಉಡುಗೋರೆ ತಂದ ವ್ಯಕ್ತಿಗೆ ಬಟ್ಟೆಯನ್ನು ಉಡುಗೊರೆಯಾಗಿ ನೀಡಲು ಆದೇಶಿಸಿದರು. (ಸ್ಬುಲ್ ಹುದಾ, ಸಂಪುಟ-5, ಪುಟ-42, ದಾರುಲ್ ಕುತುಬ್ ಇಲ್‌ಮಿಯಾ, ಬೈರುತ್)

ಮತ್ತು ಹಝ್ರತ್ ಪೈಗಂಬರ್(ಸ)ರು ಸ್ವೀಕರಿಸಿದ ಎಲ್ಲಾ ಉಡುಗೊರೆಗಳನ್ನು ಅವರು ಒಂದೇ ಸ್ಥಳದಲ್ಲಿ ಸಂಗ್ರಹಿಸಿ ಎಲ್ಲಾ ಸಹಾಬಗಳ ನಡುವೆ ಹಂಚಿದರು.

ಈ ಪ್ರಸ್ತಾಪವು ನಡೆಯುತ್ತಿದೆ. ಹುದೈಬಿಯಗೆ ಸಂಬಂಧಿಸಿ ಇನ್ನೂ ಸ್ವಲ್ಪ ವಿವರಣೆ ಬಾಕಿಯಿದೆ. ಅದನ್ನು ಮುಂದಿನ ಬಾರಿ ವಿವರಿಸಲಾಗುವುದು - ಇನ್‌ಶಾ ಅಲ್ಲಾಹ್.

ಈಗ ನಾನು ಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸುತ್ತೇನೆ ಮತ್ತು ಜುಮಾ ನಮಾಝ್ಹಿನ ನಂತರ ಅವರ ಜನಾಝ್ಹ ನಮಾಝ್ಹ್ ನಿರ್ವಹಿಸುವೆನು.

ಮೊದಲ ಪ್ರಸ್ತಾಪ ಬಾಂಗ್ಲಾದೇಶದ ಮುಹಮ್ಮದ್ ಅಬ್ದುಲ್ಲಾಹ್ ವಹ್ಹಾಬ್ ಸಾಹಿಬ್‌ರ ಪುತ್ರ ಶಹರ್‌ಯಾರ್ ರಕೀನ್ ಶಹೀದ್ ಅವರದ್ದಾಗಿದೆ.

ಈ ಘಟನೆಯ ಬಗ್ಗೆ ಹೀಗೆ ಬರೆಯಲಾಗಿದೆ: ಆಗಸ್ಟ್ 5ರಂದು ಸರ್ಕಾರ ಪದಚ್ಯುತಗೊಂಡ ನಂತರ ದೇಶದಲ್ಲಿ ಅಸ್ತವ್ಯಸ್ತೆ ಉಂಟಾದಾಗ ಅಹ್ಮದಿಯ್ಯತ್ತಿನ ವಿರೋಧಿಗಳು ಅದರಿಂದ ಲಾಭ ಪಡೆಯುತ್ತಾ ಅಹ್ಮದ್ ನಗರ್ ಜಮಾಅತಿನ ಮೇಲೆ ದಾಳಿ ನಡೆಸಿದರು. ಎದುರಾಳಿಗಳು ಅಹ್ಮದಿಯರ ಮನೆಗಳನ್ನು ಸುಡುತ್ತಾ ಜಾಮಿಅ ಅಹ್ಮದಿಯಾ ಮತ್ತು ಜಲ್ಸ ಗಾಹ್‌ನ ಕಡೆಗೆ ಬಂದರು. ಅವರಿಗೆ ಜಾಮಿಅ ಅಹ್ಮದಿಯಾಗೆ ಪ್ರವೇಶಿಸಲು ಸಾಧ್ಯವಾಗಲಿಲ್ಲ. ಆದರೆ ಜಲ್ಸ ಗಾಹ್‌ನ ಹಿಂದಿನ ಭಾಗದಲ್ಲಿ ಡ್ಯೂಟಿಯಲ್ಲಿದ್ದ ಖುದ್ದಾಮರನ್ನು ಸುತ್ತುವರೆದರು ಮತ್ತು ಅವರ ಮೇಲೆ ಹಲ್ಲೆ ನಡೆಸುತ್ತಾ ಇದ್ದರು. ಈ ವೇಳೆ ಶಹರ್‌ಯಾರ್‌ನ ತಲೆಗೆ ತೀವ್ರ ಗಾಯ ಉಂಟಾಯಿತು. ಮೂರು ತಿಂಗಳ ಚಿಕಿತ್ಸೆಯ ನಂತರ ಕೊನೆಗೆ ನವೆಂಬರ್ 8 ರಂದು ಕೇವಲ ಹದಿನಾರನೇ ವಯಸ್ಸಿನಲ್ಲಿ ಶಹೀದ್ ಆದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.**

ಅವರು ವಖ್ಫೇ ನೌ ಯೋಜನೆಯಲ್ಲಿ ಭಾಗಿಯಾಗಿದ್ದರು. ದಿವಂಗತರು ತಂದೆ ತಾಯಂದಿರನ್ನಲ್ಲದೇ ತಾತ, ಅಜ್ಜಿ, ಸಹೋದರಿ ಮತ್ತು ಇಬ್ಬರು ಸಹೋದರರನ್ನು ಅಗಲಿರುವರು. ದಿವಂಗತರ ಕುಟುಂಬದಲ್ಲಿ ಅಹ್ಮದಿಯ್ಯತ್ ಅವರ ಮುತ್ತಜ್ಜ ಹಝ್ರತ್ ಮುನ್ಷಿ ಸಿರಾಜುಲ್ ಇಸ್ಲಾಂ ಸಾಹಿಬ್ ಅವರಿಂದ ಬಂದಿತು, ಅವರು ಅಲ್ಲಾಮಾ ಝಿಲ್-ಉರ್-ರಹಮಾನ್ ಸಾಹಿಬ್ ಮೂಲಕ ಅವರ ಕುಟುಂಬದ ಹೆಚ್ಚಿನ ಸದಸ್ಯರೊಂದಿಗೆ ಅಹ್ಮದಿಯಾ ಜಮಾಅತ್ತಿಗೆ ಸೇರಿದರು. ದಿವಂಗತರು ಸ್ವತಃ ಜಮಾಅತ್ತಿನ ಕಾರ್ಯಕರ್ತರಾಗಿದ್ದರು. ಅತ್‌ಫಾಲುಲ್ ಅಹ್ಮದಿಯಾ ಅಹ್ಮದ್ ನಗರದ ಮಜ್ಲಿಸ್ ಆಮಿಲಾದಲ್ಲಿ ಸೆಕ್ರೇಟರಿ ಮಾಲ್ ಆಗಿ ಸೇವೆ ಸಲ್ಲಿಸುತ್ತಿದ್ದರು.

ಅವರ ತಾಯಿ ಬರೆಯುತ್ತಾರೆ: ಅವರ ಈ ಪುತ್ರ ಮೊದಲಿನಿಂದಲೂ ನಮಾಝ್ ಮತ್ತು ಆರಾಧನೆಯಲ್ಲಿ ನಿರತರಾಗಿರುತ್ತಿದ್ದನು ಮತ್ತು ಜಮಾಅತ್ತಿನ ಕೆಲಸಗಳಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದನು. ಇದಕ್ಕೆ ವ್ಯತಿರಿಕ್ತವಾಗಿ, ಆತನ ಓದಿನ ಕಡೆ ಮೊದಲು ಗಮನ ನೀಡು ನಂತರ ಜಮಾಅತ್ತಿನ ಕೆಲಸದಲ್ಲಿ ಪಾಲ್ಗೊಳ್ಳುವಂತೆ ಹೇಳಿದಾಗ ಆತನು ಕೋಪಗೊಳ್ಳುತ್ತಿದ್ದನು. ಅಹಮದ್‌ನಗರದಲ್ಲಿ ಯಾವುದೇ ಇಜ್‌ತಿಮಾ ಅಥವಾ ಜಲ್ಸಾದ ಯಾವುದಾದರು ಸಂದರ್ಭ ಬಂದರೆ ಅವನು ಮೊದಲು ಮನೆಯಿಂದ ಹೊರಟು ಅಲ್ಲಿಗೆ ತಲುಪುತ್ತಿದ್ದನು. ಮನೆಯ ಕಿರಿಯ ಮಗನಾಗಿದ್ದರಿಂದ ತಾಯಿ ಹೇಳುತ್ತಾರೆ: ಅವನು ನನ್ನನ್ನು ಬಹಳ ಸಹಾಯ ಮಾಡುತ್ತಿದ್ದನು. ಅವನು ಅಡುಗೆ ಮತ್ತು ಅಡುಗೆಕಾರ್ಯಗಳಲ್ಲಿ ಬಹಳಷ್ಟು ಸಹಾಯ ಮಾಡುತ್ತಿದ್ದನು. ಈ ಹುಡುಗ ಬಹಳ ಸಾಮಾಜಿಕವಾಗಿದ್ದನು ಮತ್ತು ಯಾವುದೇ ಅಪರಿಚಿತರೊಂದಿಗೆ ಬೇಗನೆ ಬೆರೆಯುತ್ತಿದ್ದನು. ಅವರು ತಾಯಿ ಮುಂದೆ ಹೇಳುತ್ತಾರೆ: ಈತನೂ ತನ್ನ ಅಣ್ಣನಂತೆಯೇ ವಿಶ್ವವಿದ್ಯಾನಿಲಯ ಪ್ರವೇಶಕ್ಕೆ ಸಿದ್ಧತೆ ನಡೆಸುತ್ತಿದ್ದನು. ನನ್ನ ಪ್ರೀತಿಯ ಶಹರ್ಯಾರ್‌ನ ಹುತಾತ್ಮತೆಯ ಬಗ್ಗೆ ಮುಂಚಿತವಾಗಿ ನನಗೆ ಸ್ವಪ್ನಗಳ ಮೂಲಕ ಈಗಾಗಲೇ ತಿಳಿಸಲಾಹಿತ್ತು ಎಂದು ಅವರ ತಾಯಿ ಹೇಳುತ್ತಾರೆ.

ಖುದ್ದಾಮುಲ್ ಅಹ್ಮದಿಯಾ ಅಹ್ಮದ್ ನಗರದ ಖಾಯಿದ್ ನಜ್ಮುಸ್ಸಾಖಿಬ್ ಹೇಳುತ್ತಾರೆ: ಕಳೆದ ವರ್ಷ ಮಾರ್ಚ್ 2023 ರಲ್ಲಿ, ಜಲ್ಸದ ಸಂದರ್ಭದಲ್ಲಿ ನಡೆದ ದಾಳಿಯ ಪರಿಣಾಮವಾಗಿ ಇಂಜಿನಿಯರ್ ಝಾಹಿದ್ ಹಸನ್ ಸಾಹಿಬ್ ಹುತಾತ್ಮರಾಗಿದ್ದರು ಮತ್ತು ನಾನು ಅವರ ನಮಾಝೆ ಜನಾಝ ಗ್ವಾಯಿಬ್ ಅನ್ನು ಇಲ್ಲಿ ನಿರ್ವಹಿಸಿರುವೆನು. ಖುತ್‌ಬದಲ್ಲಿ ಅವರ ಬಗ್ಗೆಯೂ ಪ್ರಸ್ತಾಪಿಸಲಾಗಿದೆ, ಅವರು ಹೇಳುತ್ತಾರೆ: ನಾವೆಲ್ಲರೂ ಡ್ಯೂಟಿಯಲ್ಲಿ ಉಪಾಹಾರ ಸೇವಿಸುವಾಗ ಖುತ್‌ಬವನ್ನು ಆಲಿಸುತ್ತಿದ್ದೆವು, ಆ ಸಂದರ್ಭದಲ್ಲಿ ಅಝೀಝುವ್ ಶಹರ್ಯಾರ್ ಹೇಳಿದರು: ನಾನು ಇಂದು ಹುತಾತ್ಮನಾಗಿದ್ದರೆ, ನನ್ನನ್ನೂ ಉಲ್ಲೇಖಿಸುತ್ತಿದ್ದರು. ಅದರ ವಿವರಣೆಯಲ್ಲಿ ಅವರು ಬರೆಯುತ್ತಾರೆ: ಆಗಸ್ಟ್ 5 ರಂದು ದಾಳಿಕೋರರು ಹಠಾತ್ ದಾಳಿ ಮಾಡಿದಾಗ. ಈ ಬಾರಿ ಗಲಭೆಯ ನಂತರ ಜಾಮಿಯಾದ ರಕ್ಷಣೆಗೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರಿದ್ದು, ರಸ್ತೆಯ ಇಕ್ಕೆಲಗಳಲ್ಲಿ ಹದಿನೈದು ಖುದಾಮರು ಮಾತ್ರ ಜಲ್ಸಾಗಾಹ್‌ದ ರಕ್ಷಣೆಗೆ ಕರ್ತವ್ಯ ನಿರ್ವಹಿಸಿದ್ದರು. ಶಹರ್ಯಾರ್ ಅವರೊಂದಿಗೆ ಸೇರಿಕೊಂಡಿದ್ದರು. ಅವರು ಬಹಳ ಧೈರ್ಯದಿಂದ ಕಾವಲು ಕಾಯುತ್ತಿದ್ದರು ಮತ್ತು ರಕ್ಷಣಾ ಕ್ರಮಗಳಲ್ಲಿ ಖಾಯಿದ್ ಸಾಹಿಬ್ ಅವರನ್ನು ಸಹಾಯ ಮಾಡುತ್ತಿದ್ದರು. ಏಕಾಏಕಿ ದಾಳಿಕೋರರು ಗೇಟ್ ಮುರಿದು ಒಳಗೆ ಪ್ರವೇಶಿಸಿದರು, ಮತ್ತು ಅವರು ಒಳಗೆ ಪ್ರವೇಶಿಸಿದ ತಕ್ಷಣ ದಾಳಿ ನಡೆಸಿದರು ಮತ್ತು ಲಾಠಿಗಳಿಂದ ಹೊಡೆದರು, ಹಲವರಿಗೆ ಗಾಯಗೊಳಿಸಿದರು ಮತ್ತು ಅತೀ ಹೆಚ್ಚು ಗಾಯಗೊಂಡವರು ದಿವಂಗತರಾಗಿದ್ದರು ಮತ್ತು ಅವನ ತಲೆಗೆ ಆ ಸಮಯದಲ್ಲಿ ಬಹಳಷ್ಟು ಗಾಯಗಳಾದವು, ಆ ಗಾಯಗಳು ಎಷ್ಟು ತೀವ್ರವಾಗಿದ್ದವು ಎಂದರೆ ಅವರ ದೇಹದ ಕೆಳಭಾಗವು ಸಂಪೂರ್ಣವಾಗಿ ನಿಶ್ಚೇಷ್ಟಿತವಾಗಿತ್ತು, ಅದರ ಬಗ್ಗೆ ದಿವಂಗತರು ಆ ಸಂದರ್ಭದಲ್ಲಿಯೇ ವ್ಯಕ್ತಪಡಿಸಿದರು. ಸ್ವಲ್ಪ ಹೊತ್ತಿನ ನಂತರ ಸೇನಾ ವಾಹನ ಬಂದಿದ್ದು, ದಾಳಿಕೋರರು ಗಾಯಗೊಂಡ ಅಹ್ಮದೀಯರನ್ನು ಬಿಟ್ಟು ಓಡಿ ಹೋದರು.

ಖಾಯಿದ್ ಸಾಹಿಬ್ ಬರೆಯುತ್ತಾರೆ: ದಿವಂಗತರು ಯಾವುದೇ ಸಮಯದಲ್ಲಿ ಡ್ಯುಟಿ ಮತ್ತು ಸೇವೆಯನ್ನು ನಿರ್ವಹಿಸಲು ಸಿದ್ಧವಾಗಿರುತ್ತಿದ್ದರು. ಅವರು ಮಸೀದಿಯ ಸ್ವಚ್ಛತೆ ಮತ್ತು ವಖಾರೆ ಅಮಲ್‌ನಲ್ಲಿ ಸ್ವತಃ ಭಾಗವಹಿಸುತ್ತಿದ್ದರು ಮತ್ತು ಇತರರನ್ನು ಸಹ ತೊಡಗಿಸಿಕೊಳ್ಳುತ್ತಿದ್ದರು. ಫಜ್ರ್ ಮತ್ತು ತಹಜ್ಜುದ್ ನಮಾಝ್ ಗೆ ಜನರನ್ನು ಎಬ್ಬಿಸುವ ಕರ್ತವ್ಯವನ್ನು ಅವರು ನಿರ್ವಹಿಸುತ್ತಿದ್ದರು. ಮಾಂಗ್ಲಾದೇಶದ ಜಾಮಿಯಾದ ಅಧ್ಯಾಪಕರಾದ ಜುಹೈರ್ ಸಾಹೇಬ್ ಹೇಳುತ್ತಾರೆ: ಅವರನ್ನು ದಫನ್ ಮಾಡುವ ದಿನದಂದು ನಾನು ಆ ಪ್ರದೇಶದ ಜಲ್ಸಾಗಾಹ್‌ದಲ್ಲಿ ಡ್ಯುಟಿ ನಿಡುತ್ತಿದ್ದೆ. ನಾನು ಅಹ್ಮದ್ ನಗರದ ಓರ್ವ ಖಾದಿಮ್‌ನನ್ನು ನೀವೆಲ್ಲರು ಸಾಮಾನ್ಯವಾಗಿ ಅವರೊಂದಿಗೆ ಇರುತ್ತಿದ್ದೀರಿ ಮತ್ತು ಆಟವಾಡುತ್ತಿದ್ದಿರಿ. ಅವರನ್ನು ಇತರರಿಂದ ಪ್ರತ್ಯೇಕಿಸುವ ಗುಣಲಕ್ಷಣ ಯಾವುದಾಗಿದೆ ಎಂದು ವಿಚಾರಿಸಿದೆ. ಅದಕ್ಕೆ ಅವರು ಹೇಳಿದರು: ಅದೇ 23ನೇ ಜಲ್ಸಾದ ಸಂದರ್ಭದಲ್ಲಿ ಶಹೀದ್ ಝಾಹಿದ್ ಹಸನ್ ಅವರ ಬಗ್ಗೆ ಪ್ರದರ್ಶನವನ್ನು ಹಾಕಲಾಯಿತು ಮತ್ತು ನಾವೆಲ್ಲರೂ ಒಟ್ಟಿಗೆ ಆ ಪ್ರದರ್ಶನವನ್ನು ನೋಡುತ್ತಿದ್ದೇವು ಅಷ್ಟರಲ್ಲಿ ಅವರು ಇದ್ದಕ್ಕಿದ್ದಂತೆ ರಕೀನ್ ಹೀಗೆ ಹೇಳಲು ಪ್ರಾರಂಭಿಸಿದರು. 'ನಾನು ಝಾಹಿದ್ ಅಣ್ಣನಂತೆ ಹುತಾತ್ಮನಾಗಬಹುದೆಂದು ನಾನು ಬಯಸುತ್ತೇನೆ. ನಾನು ಶಹೀದ್ ಆಗಿರುತ್ತಿದ್ದರೆ ನನ್ನ ಚಿತ್ರವೂ ಇಲ್ಲಿ ಇರುತ್ತಿತ್ತು ಮತ್ತು ಖುತ್‌ಬದಲ್ಲಿ ನನ್ನ ಬಗ್ಗೆಯೂ ಪ್ರಸ್ತಾಪಿಸಲಾಗುತ್ತಿತ್ತು. ಅವರಿಂದ ಇದನ್ನು ಕೇಳಿ ನಮಗೆ ತುಂಬಾ ಆಶ್ಚರ್ಯವಾಯಿತು. ಸರ್ವಶಕ್ತನಾದ ಅಲ್ಲಾಹನು ಹೇಗೆ ಅವರ ಆಸೆಯನ್ನು ಪೂರೈಸಿದನು ಎಂದು.

ದಿವಂಗತರ ಚಿಕ್ಕಮ್ಮ ಝಿನತ್ ಫೌಝಿಯಾ ಹೇಳುತ್ತಾರೆ: ಅವರು ತಮ್ಮ ಸಹೋದರರಲ್ಲಿ ಕಿರಿಯರಾಗಿದ್ದರು. ಎಲ್ಲರ ಮಾತನ್ನು ಕೇಳುತ್ತಿದ್ದರು, ಎಲ್ಲರ ಕೆಲಸವನ್ನೂ ಮಾಡುತ್ತಿದ್ದರು ಮತ್ತು ದಾಳಿಯ ದಿನ ಮನೆಯಿಂದ

ಹೊರಡುವಾಗ ಮಸೀದಿಯುನ್ನು ರಕ್ಷಿಸಬೇಕು, ಸಾಧ್ಯವಾಗದಿದ್ದರೆ ಹುತಾತ್ಮರಾಗುವುದಾಗಿ ಹೇಳುತ್ತಿದ್ದರು. ಆದಾಗ್ಯೂ, ದಿವಂಗತ ಹುತಾತ್ಮರು ವಯಸ್ಕರಿಗೂ ತ್ಯಾಗದ ಉದಾಹರಣೆಯನ್ನು ನೀಡಿದ್ದಾರೆ. ಅಲ್ಲಾಹನು ಅವರ ಶ್ರೇಣಿಯನ್ನು ಹೆಚ್ಚಿಸಲಿ ಮತ್ತು ಅವರ ಅವರ ಪೋಷಕರಿಗೆ ಮತ್ತು ಸಂಬಂಧಿಕರಿಗೆ ತಾಳ್ಮೆ ಮತ್ತು ಧೈರ್ಯವನ್ನು ನೀಡಲಿ.

ಎರಡನೆಯ ಪ್ರಸ್ತಾವನೆ, ಇದು ನಮ್ಮ ಹಳೆಯ ಅರಬ್ ಸ್ನೇಹಿತರದ್ದಾಗಿದೆ. ಕಬಾಬೀರ್‌ನ ಅಬ್ದುಲ್ಲಾಹ್ ಅಸದ್ ಔದ ಸಾಹಿಬ್‌ರದ್ದಾಗಿದೆ. ಅವರು ಇತ್ತೀಚೆಗೆ 94 ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್–**

ಅವರು ಕಬೀರ್‌ನಲ್ಲಿರುವ ಅಹ್ಮದಿ ಮುಬಲ್ಲಿಗರೊಂದಿಗೆ ಅತ್ಯಂತ ಪ್ರೀತಿಯ ಮತ್ತು ಪ್ರಾಮಾಣಿಕ ಸಂಬಂಧವನ್ನು ಹೊಂದಿರುವ ಕುಟುಂಬದಲ್ಲಿ ಬೆಳೆದರು. ಈ ಮುಬಲ್ಲಿಗರ ಪ್ರಾಮಾಣಿಕ ಪ್ರಯತ್ನ ಮತ್ತು ಪ್ರಾರ್ಥನೆಯ ಫಲವಾಗಿ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಹಝ್ರತ್ ಮುಸ್ಲೆಹ್ ಮೌಊದ್(ರ.ಅ) ಅವರ ಪ್ರಾರ್ಥನೆಗಳಿಂದಾಗಿ ಕಬಾಬೀರ್ ಸರ್ವಶಕ್ತನಾದ ಅಲ್ಲಾಹನ ರಕ್ಷಣೆ ಮತ್ತು ಶಾಂತಿಯಲ್ಲಿ ಇದೆ. ವಿಶೇಷವಾಗಿ ಪ್ಯಾಲೆಸ್ಟೈನ್ ಯುದ್ಧದ ಸಮಯದಲ್ಲಿ ಮತ್ತು 1948 ರಲ್ಲಿ ಸಾಮೂಹಿಕ ಸ್ಥಳಾಂತರದ ಸಮಯದಲ್ಲಿ, ಅಲ್ಲಾಹನು ಕಬಾಬೀರ್ ಅನ್ನು ರಕ್ಷಿಸಿದನು. ದಿವಂಗತರು ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಕಾಲದಿಂದ ಅವರ ಜೀವನದ ಕೊನೆಯವರೆಗೂ, ಅವರು ಪತ್ರವ್ಯವಹಾರ ಮತ್ತು ವಿಧೇಯತೆ ಮತ್ತು ಪ್ರಾಮಾಣಿಕತೆಯ ಮೂಲಕ ಖಿಲಾಫತೆ ಅಹ್ಮದಿಯಾದೊಂದಿಗೆ ನಿಕಟ ಸಂಬಂಧವನ್ನು ಹೊಂದಿದ್ದರು. ಅವರು ಆರಂಭಿಕ ಮೂಸಿಗಳಲ್ಲಿ ಒಬ್ಬರಾಗಿದ್ದರು. 1934 ರಲ್ಲಿ, ಹಝ್ರತ್ ಮೌಲಾನಾ ಅಬುಲ್ ಅತಾ ಸಾಹಿಬ್ ಜಾಲಂಧರಿ ಅವರು ಅಹ್ಮದಿಯಾ ಶಾಲೆಯನ್ನು ತೆರೆದರು ಮತ್ತು ದಿವಂಗತರು ಅಲ್ಲಿಯೇ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಪಡೆದರು. ನಂತರ 1948 ರಲ್ಲಿ, ಅವರು ಇಂಗ್ಲಿಷ್ ಶಾಲೆಗೆ ಪ್ರವೇಶಿಸಿದರು ಮತ್ತು ಅಲ್ಲಿಂದ ತಮ್ಮ ಮೆಟ್ರಿಕ್ಯುಲೇಷನ್ ಮಾಡಿದರು. ನಂತರ ಗಮನಾರ್ಹ ಯಶಸ್ಸಿನೊಂದಿಗೆ ಅಲ್–ಖುದ್ಸ್ ವಿಶ್ವವಿದ್ಯಾಲಯದಿಂದ ಎಂಎ ಪದವಿಯನ್ನು ಪಡೆದರು. ಇಪ್ಪತ್ತು ವರ್ಷಗಳ ಕಾಲ ಕೈಗಾರಿಕೆ ಮತ್ತು ವ್ಯಾಪಾರ ಸಚಿವಾಲಯದಲ್ಲಿ ಕಾರ್ಯ ನಿರ್ವಹಿಸಿದರು. ಆ ಬಳಿಕ ಸರ್ಕಾರದ ಲೆಕ್ಕ ಪರಿಶೋಧನಾ (ಆಡಿಟ್) ಇಲಾಖೆಯಲ್ಲಿ ಉನ್ನತ ಹುದ್ದೆಯಲ್ಲಿ ಕೆಲಸ ಮಾಡುವ ಅವಕಾಶ ಲಭಿಸಿತು. ಅಲ್ಲಿಂದ 1995ರಲ್ಲಿ ನಿವೃತ್ತರಾದರು. ಅವರ ನಿವೃತ್ತಿಯ ನಂತರ, ಅವರ ಹೆಸರನ್ನು ಧಾರ್ಮಿಕ ವ್ಯವಹಾರಗಳ ಸಚಿವಾಲಯದಲ್ಲಿ ಇಸ್ಲಾಮಿಕ್ ವ್ಯವಹಾರಗಳ ಅಧ್ಯಕ್ಷರಾಗಿ ಪ್ರಸ್ತುತಪಡಿಸಲಾಯಿತು. ಕೆಲವು ಇಸ್ಲಾಮಿಕ್ ದೇಶಗಳು ನಿಮ್ಮನ್ನು ಅಹ್ಮದಿ ಎಂದು ವಿರೋಧಿಸಿದವು. ಇದರ ಮೇಲೆ, ಅವರು ಅವರ ತತ್ವಗಳಿಗೆ ಮತ್ತು ಅಹಮದಿಯತ್‌ಗೆ ಸಂಬಂಧೀಸಿ ಅದನ್ನು ತೊರೆದರು.

1945 ರಲ್ಲಿ, ಹಝ್ರತ್ ಚೌಧರಿ ಝಫರುಲ್ಲಾ ಖಾನ್ ಸಾಹಿಬ್ ಅವರು ವಿಶ್ವಸಂಸ್ಥೆಯ ಪ್ರತಿನಿಧಿಯಾಗಿ ಪ್ಯಾಲೆಸ್ತೀನ್‌ಗೆ ಭೇಟಿ ನೀಡಿದರು ಮತ್ತು ಆ ಸಮಯದಲ್ಲಿ ಅವರು ಮಿಷನ್ ಹೌಸ್‌ಗೆ ಬಂದರು ಮತ್ತು ಷರೀಫ್ ಔದಾ ಅವರ ಅಜ್ಜರಾಗಿದ್ದ ದಿವಂಗತ ಅಬು ಸಲಾಹ್ ಮುಹಮ್ಮದ್ ಸಾಲಿಹ್ ಔದಾ ಸಾಃಇಬ್ ಅವರ ಮನೆಯಲ್ಲಿ ತಂಗಿದ್ದರು. ಆಗ ದಿವಂಗತ ಅಬ್ದುಲ್ಲಾ ಅಸದ್ ಅವರಿಗೆ ಹದಿನೈದು ವರ್ಷ ಪ್ರಾಯವಾಗಿತ್ತು. ಅವರು ಪ್ರತಿದಿನ ಚೌಧರಿ ಸಾಹೇಬರಿಗೆ ಸೇವೆ ಸಲ್ಲಿಸಲು ಬರುತ್ತಿದ್ದಿರಿ ಮತ್ತು ಅವರಿಗೆ ದಿನಪತ್ರಿಕೆಗಳನ್ನು ಸಹ ನೀಡುತ್ತಿದ್ದಿರಿ.

ದಿವಂಗತರು ಸದಾ ಮುಬಲ್ಲಿಗೀನರಿಗೆ ತುಂಬಾ ಹತ್ತಿರವಾಗಿದ್ದರು ಮತ್ತು ಜನರಲ್ ಸೆಕ್ರೇಟರಿ, ಸೆಕ್ರೇಟರಿ ತಾಲೀಮ್ ವ ತರ್‌ಬಿಯ್ಯತ್, ಸೆಕ್ರೇಟರಿ ಉಮೂರೆ ಖಾರಿಜ, ಸದರ್ ಮಜ್ಲಿಸ್ ಅನ್ಸಾರುಲ್ಲಾ, ಸೆಕ್ರೇಟರಿ ಸದ್‌ಸಾಲ ಜೂಬಿಲೀ ಎಂದು ಹುದ್ದೆಗಳಲ್ಲಿ ಜಮಾಅತ್‌ಗೆ ಸೇವೆಸಲ್ಲಿಸುವ ಅವಕಾಶ ಅವರಿಗೆ ಲಭಿಸಿದೆ.

ಅವರು ಕಬಾಬೀರ್‌ನಲ್ಲಿ ಅಹ್ಮದಿಯಾ ಮದ್ರಸಾದ ಪುನರ್ನಿರ್ಮಾಣದ ಮಹಾ ಯೋಜನೆಯಲ್ಲಿ ದಿವಂಗತ ಜಲಾಲುದ್ದೀನ್ ಖಮರ್ ಸಾಹಿಬ್ ಮುಬಲ್ಲಿಗ್ ಸಿಲ್‌ಸಿಲಾ ಅವರ ಬೆಂಬಲಿಗ ಮತ್ತು ಸಹಾಯಕರಾಗಿದ್ದರು. ಅವರು ಶ್ರೇಷ್ಠ ಲೇಖಕರೂ ಆಗಿದ್ದರು. ಎಪ್ಪತ್ತು ವರ್ಷಗಳ ಕಾಲ ಅರೇಬಿಕ್ ರಿಸಾಲಾ ಅಲ್–ಬುಶ್ರದಲ್ಲಿ ಡಜನ್ಗಟ್ಟಲೆ ಲೇಖನಗಳನ್ನು ಬರೆದಿದ್ದಾರೆ. ಮಾನ್ಯ ಫಝ್ಲ್ ಇಲಾಹಿ ಬಶೀರ್ ಸಾಹಿಬ್ ಅವರ ಕಾಲಾವಧೀಯಲ್ಲಿ ಜಮಾಅತ್ ನಲ್ಲಿ ಪ್ರಕಟವಾದ ಸೂರಾ ಕಹ್ಫ್ ನ ವ್ಯಾಖ್ಯಾನವನ್ನು ಅವರು ಇಂಗ್ಲಿಷ್‌ನಿಂದ ಅರೇಬಿಕ್‌ಗೆ ಅನುವಾದಿಸಿದರು.

ಅಹ್ಮದಿಯಾ ಜಮಾಅತ್ ಮತ್ತು ಬಹಾಯಿಸಂ ಒಂದೇ ನಾಣ್ಯದ ಎರಡು ಮುಖಗಳು, ಜಮಾಅತ್ ಅನ್ನು ಬಹಾಯಿಗಳೊಂದಿಗೆ ಬೆರೆಸುವ ಜಮಾಅತ್ ವಿರುದ್ಧ ಅರಬ್ ದೇಶಗಳಲ್ಲಿ ಪ್ರಚಾರವಿತ್ತು. ಅಬ್ದುಲ್ಲಾ ಅಸದ್ ಅವರು ಇದಕ್ಕೆ ಹಲ್ಲು ಮುರಿಯುವ ಉತ್ತರವನ್ನು ನೀಡಿದರು ಮತ್ತು ಅರೇಬಿಕ್ ಭಾಷೆಯಲ್ಲಿ **ಅಲ್–ಮುವಾಮರತುಲ್–ಕುಬ್ರಾ** ಎಂಬ ಪುಸ್ತಕವನ್ನು ಸಂಗ್ರಹಿಸಿದರು. ಅಂತೆಯೇ, ಅವರು ಕಬಾಬಿರ್‌ನಲ್ಲಿ ಜಮಾಅತ್ ಅಹ್ಮದಿಯಾ ಇತಿಹಾಸದ ವಿಷಯದ ಕುರಿತು **ಅಲ್–ಕಬಾಬೀರ್ ಬಲಾದಿ** ಎಂಬ ಪುಸ್ತಕವನ್ನು ಬರೆದಿದ್ದಾರೆ. ಅವರು ಜಮಾಅತ್‌ನ ನಿಜವಾದ ಸೇವಕರಾಗಿದ್ದರು, ಅವರು ಅತ್ಯಂತ ಪ್ರಾಮಾಣಿಕ, ಉತ್ಸಾಹಭರಿತ, ಅಹ್ಮದಿಯಾ ಮತ್ತು ಜಮಾಅತ್‌ಗೆ ಸಂಬಂಧಿಸಿದ ಎಲ್ಲದರ ಬಗ್ಗೆ ಹೆಮ್ಮೆಪಡುತ್ತಿದ್ದರು. ನಿಮಗೂ ಸಂಸತ್ ಸದಸ್ಯನಾಗುವ ಆಫರ್ ಬಂದಿತ್ತು ಆದರೆ ಅವರು ರಾಜಕೀಯದ ಒಂದು ತತ್ವವಿರುತ್ತದೆ ಆದರೆ ನನ್ನ ತತ್ವ ಅಹ್ಮದಿಯ್ಯತ್ ಆಗಿದೆ ಎಂದು ನಿರಾಕರಿಸಿದರು.

ದಿವಂಗತರ ಪುತ್ರ ಹೇಳುತ್ತಾರೆ: ಕೆಲವೊಮ್ಮೆ ನಮ್ಮ ತಂದೆ ಜಮಾಅತ್ತಿನ ಕೆಲಸದಲ್ಲಿ ನಿರತರಾಗಿದ್ದರೆ ಮತ್ತು ತಾಯಿಗೆ ಒಟ್ಟಿಗೆ ಚಹಾ ಕುಡಿಯಲು ಅಥವಾ ಎಲ್ಲಾದರೂ ಹೋಗಬೇಕಾದರೆ ಅವರ ತಂದೆ ತಾಯಿಗೆ ಹೀಗೆ ಹೇಳುತ್ತಿದ್ದರು: ಈಗ ನನಗೆ ಜಮಾಅತ್ತಿನ ಬಹಳ ಕೆಲಸವಿದೆ ಅದನ್ನು ಮುಗಿಸಿದ ನಂತರವೇ ಹೋಗಬಹುದು. ಅವರು ಜಮಾಅತ್ತಿನ ಕೆಲಸಕ್ಕೆ ಮೊದಲು ಆದ್ಯತೆ ನೀಡುತ್ತಿದ್ದರು. ಅವರು ಮೂವರು ಪುತ್ರರು ಮತ್ತು ಮೂವರು ಪುತ್ರಿಯರು ಮತ್ತು ಹದಿನಾಲ್ಕು ಮೊಮ್ಮಕ್ಕಳನ್ನು ಅಗಲಿದ್ದಾರೆ.

ದಿವಂಗತರ ಮೇಲೆ ಸರ್ವಶಕ್ತನಾದ ಅಲ್ಲಾಹನು ಮಗ್‌ಫಿರತ್ ಮತ್ತು ಕ್ಷಮೆಯನ್ನು ನೀಡಲಿ. ಪದವಿಗಳನ್ನು ವರ್ಧಿಸಲಿ ಮತ್ತು ಅವರ ಪೀಳಿಗೆಗೆ ಅವರ ಹೆಜ್ಜೆಗಳನ್ನು ಅನುಸರಿಸಲು ಅವಕಾಶವನ್ನು ನೀಡಲಿ. ಆಮೀನ್. ನಾನು ಹೇಳಿದಂತೆ, ಜುಮುಅ ನಮಾಝ್ ನಂತರ, ನಾನು ಅವರಿಬ್ಬರ ನಮಾಝು ಜನಾಝು ಗ಼ಾಯಿಬ್ ನಿರ್ವಹಿಸುವೆನು.

**(ಅಲ್–ಫಝ್ಲ್ ಇಂಟರ್‌ನ್ಯಾಶನಲ್, ಡಿಸೆಂಬರ್ 6, 2024, ಪುಟಗಳು 2–6)**

––––––––––––*****––––––––––––

*(ಪುಟ ಸಂಖ್ಯೆ 10ರ ಉಳಿದ ಭಾಗ)*

ವಾಸ್ತವವಾಗಿ, ಜ್ಞಾನವು ಒಬ್ಬ ವ್ಯಕ್ತಿಯನ್ನು ಪಾಪದಿಂದ ರಕ್ಷಿಸುತ್ತದೆ. ಆದ್ದರಿಂದ ಮನುಷ್ಯ ಯಾವಾಗಲೂ ಜ್ಞಾನ ಮತ್ತು ಅಲ್ಲಾಹನ ಪ್ರೀತಿಯಲ್ಲಿ ಪ್ರಗತಿ ಸಾಧಿಸಲು ಪ್ರಯತ್ನಿಸಬೇಕು.

ಅಜ್ಞಾನದಲ್ಲಿ ಎರಡು ವಿಧಗಳಿವೆ, ಒಂದು ಶಾಶ್ವತ, ಬಲಿಪಶು ಜ್ಞಾನದಿಂದ ಸಂಪೂರ್ಣವಾಗಿ ವಂಚಿತನಾಗಿರುತ್ತಾನೆ ಮತ್ತು ಪಾಪದಲ್ಲಿ ಅವನು ಎಲ್ಲಾ ಆನಂದವನ್ನು ಪಡೆಯುತ್ತಾನೆ, ಇನ್ನೊಂದು ತಾತ್ಕಾಲಿಕವಾಗಿದೆ ಎಂದು ನೆನಪಿನಲ್ಲಿಡಬೇಕು. ಕೀಳುಮಟ್ಟದ ವಿದ್ವಾಂಸರೂ ಇದಕ್ಕೆ ಬಲಿಯಾಗುತ್ತಾರೆ, ಏಕೆಂದರೆ ಕೆಲವೊಮ್ಮೆ ಅವರ ಜ್ಞಾನದ ಮಟ್ಟವು ಕಡಿಮೆಯಾಗುತ್ತದೆ, ಆದ್ದರಿಂದ ಅವರು ಭಾವನಾತ್ಮಕ ಭಾವನೆಗಳಿಗೆ ಬಲಿಯಾಗುತ್ತಾರೆ, ಆದ್ದರಿಂದ ಇದು ಹದೀಸ್ ಷರೀಫ್ನಲ್ಲಿ ಬರುತ್ತದೆ. **ಲಾಯಝ್‌ನಿ ಹೀನ ಯಝ್‌ನಿ ವಹುವ ಮುಮಿನುನ್ ಫಯಖ್ರುಜು ಮಿನ್‌ಹುಲ್ ಈಮಾನ ಫಯಸೀರು ಅಲಾ ರಾಸಿಹೀ ಕಝ್ಝುಲ್ಲತಿ** ಅಂದರೆ ಒಬ್ಬ ವ್ಯಭಿಚಾರಿಯು ವ್ಯಭಿಚಾರ ಮಾಡುವಾಗ, ಆ ಸಮಯದಲ್ಲಿ ಅವನ ಹೃದಯವು ನಂಬಿಕೆಯ ಸ್ಥಿತಿಯಲ್ಲಿರುವುದಿಲ್ಲ ಮತ್ತು ಅವನ ನಂಬಿಕೆಯು ಅವನ ಹೃದಯದಿಂದ ಹೊರಬಂದು ಅವನ ತಲೆಯ ಮೇಲೆ ಛತ್ರಿಯಂತೆ ಸುಳಿದಾಡುತ್ತದೆ. (ತಿರ್ಮಿದಿ ಅಬ್ವಾಬುಲ್ ಈಮಾನ್)

**ವಅಸ್‌ಲಿಹೂ–** ತಮ್ಮನ್ನು ತಾವು ಸುಧಾರಿಸಿಕೊಳ್ಳಿ ಅಥವಾ ಇತರರನ್ನು ಸುಧಾರಿಸಿ ಎಂಬುದಕ್ಕೆ ಎರಡೂ ಅರ್ಥಗಳಿವೆ. ಅದರಲ್ಲಿ, ಒಬ್ಬ ವ್ಯಕ್ತಿಯು ತಾನು ಮಾಡಿದ ಪಾಪಕ್ಕೆ ಹೃದಯದಿಂದ ಪಶ್ಚಾತ್ತಾಪ ಪಡುವುದು ಮಾತ್ರವಲ್ಲ, ಆ ಪಾಪಕ್ಕೆ ಕಾರಣವಾದ ಸಂಗತಿಗಳನ್ನು ತೆಗೆದುಹಾಕಬೇಕು ಎಂದು ಉಲ್ಲೇಖಿಸಲಾಗಿದೆ. ಭವಿಷ್ಯದಲ್ಲಿ ಪಾಪವು ನಡೆಯದಂತೆ, "ಇತರರನ್ನು ಸರಿಪಡಿಸಿ" ಎಂದರೆ ಅವರ ಪಾಪಗಳಿಗೆ ಪ್ರಾಯಶ್ಚಿತ್ತವಾಗಿ, ಅವರು ಮಾರ್ಗದರ್ಶನ ಮಾಡಿದವರಿಗೆ ಪ್ರತಿಫಲವಾಗಿ ಇತರ ಜನರನ್ನು ಸರಿಪಡಿಸಬೇಕು. ಅವರನ್ನು ಸೇರಿಕೊಳ್ಳುತ್ತಾರೆ ಮತ್ತು ಹಿಂದಿನ ಪಾಪದ ಕಾರಣದಿಂದ ಕಾರ್ಯಗಳ ಕೊರತೆಯನ್ನು ನೀಗಿಕೊಳ್ಳುತ್ತಾರೆ. **(ತಫ್ಸೀರ್ ಕಬೀರ್, ಸಂಪುಟ 4, ಪುಟ 267, ಪ್ರಕಟಿತ ಖಾದಿಯಾನ್ 2010)**

## ಅಂತಿಮ ವಿಜಯ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: ಪ್ರಾಯಶಃ ಕೊನೆಗೆ ಕ್ರೈಸ್ತ ಧರ್ಮ ಲೋಕದಾದ್ಯಂತ ವ್ಯಾಪಿಸುವುದೆಂದು ಅಥವಾ ಬೌದ್ಧ ಧರ್ಮ ಲೋಕವನ್ನೆಲ್ಲ ಆವರಿಸುವುದೆಂದು ಭೂಲೋಕದ ಜನರು ಆಲೋಚಿಸುತ್ತಿರಬಹುದು. ಆದರೆ ಅವರ ಈ ಯೋಚನೆ ತಪ್ಪಾಗಿದೆ. ಆಕಾಶದಲ್ಲಿ ದೇವನಿಂದ ನಿರ್ಧರಿಸಲ್ಪಡುವವರೆಗೆ ಯಾವುದೇ ಕಾರ್ಯವು ಭೂಮಿಯಲ್ಲಿ ಸಂಭವಿಸಲಾರದು. ಅಂತಿಮವಾಗಿ ಇಸ್ಲಾಮ್ ಧರ್ಮ ಜನರ ಹೃದಯಗಳನ್ನು ಜಯಿಸುವುದು ಎಂದು ಆಕಾಶ ಭೂಮಿಗಳ ಅಧಿಪತಿಯಾದ ದೇವನು ನನಗೆ ತಿಳಿಸಿರುವನು.

**(ಬರಾಹೀನೆ ಅಹ್ಮದಿಯಾ, ಭಾಗ 5; ರೂಹಾನೀ ಖ಼ಝಾಇನ್ ಸಂಪುಟ 21, ಪುಟ 427)**

# ಖುತ್‌ಬ ಜುಮುಅ

ಉರ್ವಾ ಹೇಳಿದರು: ಓ ನನ್ನ ಜನರೇ, ನಾನು ರಾಯಭಾರಿಯಾಗಿ ಖೈಸರ ಮತ್ತು ಕಿಸ್ರಾ ಮತ್ತು ನಜಾಶಿಯ ಆಸ್ಥಾನಗಳಿಗೆ ಹೋಗಿದ್ದೇನೆ. ಅಲ್ಲಾಹನ ಆಣೆ! ಸಹಾಬರವರು ಹಝ್ರತ್ ಪೈಗಂಬರ್(ಸ)ರನ್ನು ಅನುಸರಿಸುವ ರೀತಿಯಲ್ಲಿ ಬೇರೆ ಯಾವ ಅರಸನ್ನು ಅನುಸರಿಸುವುದಿಲ್ಲ.

ಹಝ್ರತ್ ಪೈಗಂಬರ್(ಸ) ಹೇಳಿದರು: "ನಾವು ಯುದ್ಧ ಮಾಡುವ ಉದ್ದೇಶದಿಂದ ಬಂದಿಲ್ಲ. ನಾವು ಕೇವಲ ಉಮ್ರ ಮಾಡುವ ಉದ್ದೇಶದಿಂದ ಬಂದಿದ್ದೇವೆ. ಮಕ್ಕಾದ ಖುರೈಶಿಯರನ್ನು ಯುದ್ಧದ ಬೆಂಕಿ ಸುಟ್ಟು ಬೂದಿಯನ್ನಾಗಿ ಮಾಡಿದೆಯಾದರೂ ಈ ಜನರು ಹಿಂದೆ ಸರಿಯುತ್ತಿಲ್ಲ ಎಂಬುದು ದುಃಖಕರ. ಅವರು ನನ್ನ ವಿರುದ್ಧ ಯುದ್ಧ ಮಾಡುವುದನ್ನು ನಿಲ್ಲಿಸಿ ನನ್ನನ್ನು ಇತರ ಜನರಿಗಾಗಿ ಬಿಟ್ಟು ಬಿಡುವ ಸಂಧಿಗೂ ನಾನು ತಯಾರಿದ್ದೇನೆ. ಆದರೆ ಅವರು ನನ್ನ ಈ ಸಲಹೆಯನ್ನು ಸಹ ನಿರಾಕರಿಸಿ ಯುದ್ಧದ ಬೆಂಕಿ ಉರಿಯುವಂತೆ ಮಾಡುವುದಾದರೆ, ಯಾರ ಕೈಯಲ್ಲಿ ನನ್ನ ಜೀವವಿದೆಯೋ ಆ ಅಲ್ಲಾಹನ ಆಣೆ, ನಾನು ಕೂಡ ಈ ಹೋರಾಟದಿಂದ ಹಿಂದೆ ಸರಿಯುವುದಿಲ್ಲ. ಒಂದೋ ನನ್ನ ಜೀವ ಈ ಮಾರ್ಗದಲ್ಲಿ ಬಲಿದಾನವಾಗುವುದು, ಇಲ್ಲದಿದ್ದರೆ ಅಲ್ಲಾಹನು ನನಗೆ ವಿಜಯವನ್ನು ನೀಡುವನು."

ಹಝ್ರತ್ ಪೈಗಂಬರ್(ಸ)ರ ಹಿಂದೆ ಕುಳಿತಿದ್ದ ಹಝ್ರತ್ ಅಬೂಬಕರ್(ರ.ಅ) ಕೋಪಗೊಂಡು ಉರ್ವಾಗೆ ಹೇಳಿದರು: ನಿನ್ನ ವಿಗ್ರಹವವಾದ ಲಾತ್ ಅನ್ನು ಚುಂಬಿಸುತ್ತಾ ಇರು, ಅಂದರೆ, ಅದನ್ನು ಪೂಜಿಸು ಆದರೆ ನಮಗೆ ಈ ವಿಷಯಗಳನ್ನು ಹೇಳಬೇಡ. ನಾವು ಹಝ್ರತ್ ಪೈಗಂಬರ್(ಸ)ರನ್ನು ಬಿಟ್ಟು ಹೋಗುತ್ತೇವೆಯೇ?

ಖುರೈಷಿಗಳು ಶಾಂತಿಯ ಕೊರತೆಯನ್ನು ಸೃಷ್ಟಿಸುತ್ತಲೇ ಇದ್ದರು, ಆಗ ಹಝ್ರತ್ ಪೈಗಂಬರ್(ಸ)ರು ಸಹಾಬರವರಿಗೆ ಹೀಗೆ ಹೇಳಿದರು: ಬನ್ನಿರಿ ಮತ್ತು ನನ್ನ ಕೈಯಲ್ಲಿ ಕೈಯಿಟ್ಟು (ಇಸ್ಲಾಮಿನಲ್ಲಿ ಬೈಅತ್ ಮಾಡುವ ರೀತಿಯಂತೆ) ನಿಮ್ಮಲ್ಲಿ ಯಾವನೇ ವ್ಯಕ್ತಿ ಬೆನ್ನು ತಿರುಗಿಸಲಾರ ಮತ್ತು ಜೀವತ್ಯಾಗ ಮಾಡಬೇಕಾಗಿ ಬಂದರೂ ತಮ್ಮ ಜಾಗವನ್ನು ಬಿಟ್ಟು ಹೋಗಲಾರ ಎಂದು ಪ್ರತಿಜ್ಞೆ ಮಾಡಿರಿ.

ಬೈಅತ್ ನಡೆಯುತ್ತಿದ್ದಾಗ ಹಝ್ರತ್ ಪೈಗಂಬರ್(ಸ) ತನ್ನ ಎಡಗೈಯನ್ನು ಬಲಗೈಯ ಮೇಲಿಟ್ಟು ಹೀಗೆ ಹೇಳಿದರು: ಇದು ಉಸ್ಮಾನ್‌ರ ಕೈಯಾಗಿದೆ. ಏಕೆಂದರೆ ಅವರು ಇಲ್ಲಿ ಇರುತ್ತಿದ್ದರೆ ಈ ಪರಿಶುದ್ಧ ವ್ಯಾಪಾರದಲ್ಲಿ ಅವರು ಯಾರಿಗಿಂತಲೂ ಹಿಂದೆ ಇರುತ್ತಿರಲಿಲ್ಲ. ಆದರೆ ಈ ಸಮಯದಲ್ಲಿ, ಅವರು ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಕೆಲಸದಲ್ಲಿ ನಿರತರಾಗಿದ್ದಾರೆ.

ಸಹಾಬರವರು ಬೈಅತೆ ರಿಝ್ವಾನ್ ಅನು ಉಲ್ಲೇಖಿಸಿ ಹೀಗೆ ಹೇಳುತ್ತಿದ್ದರು: ಈ ಬೈಅತ್ (ಪ್ರತಿಜ್ಞೆ) ಸಾವಿನ ಪ್ರತಿಜ್ಞೆಯ ಬೈಅತ್ ಆಗಿತ್ತು ಅಂದರೆ, ಪ್ರತಿಯೊಬ್ಬ ಮುಸಲ್ಮಾನನು ಇಸ್ಲಾಂ ಧರ್ಮಕ್ಕಾಗಿ ಮತ್ತು ಇಸ್ಲಾಂನ ಗೌರವಕ್ಕಾಗಿ ತನ್ನ ಪ್ರಾಣವನ್ನು ಪಣಕ್ಕಿಡುತ್ತಾನೆ, ಆದರೆ ಹಿಂದೆ ಸರಿಯುವುದಿಲ್ಲ. ಮತ್ತು ಈ ಪ್ರತಿಜ್ಞೆಯ ವಿಶೇಷ ಅಂಶವೆಂದರೆ ಈ ಪ್ರತಿಜ್ಞೆಯು ತಾತ್ಕಾಲಿಕ ಉತ್ಸಾಹದಲ್ಲಿ ಮಾಡಿದ ಬಾಯಿಯ ತಾತ್ಕಾಲಿಕ ನಿವೇದನೆಯಾಗಿರಲಿಲ್ಲ, ಆದರೆ ಅದು ಹೃದಯದ ಆಳದ ಧ್ವನಿಯಾಗಿತ್ತು, ಇದರ ಹಿಂದೆ ಮುಸ್ಲಿಮರ ಎಲ್ಲಾ ಶಕ್ತಿ ಒಂದೇ ಹಂತದಲ್ಲಿ ಸಂಗ್ರಹಿಸಲಾಗಿತ್ತು.

**ಹುದೈಬಿಯಾ ಯುದ್ಧದ ಸಂದರ್ಭಗಳು ಮತ್ತು ಘಟನೆಗಳು ಮತ್ತು ಬೈಅತೆ ರಿಝ್ವಾನ್‌ನ ವಿವರಾತ್ಮಕ ವಿಶ್ವಾಸವರ್ಧಕ ಪ್ರಸ್ತಾವನೆ ಹಾಗೂ ಪ್ರಪಂಚದ ಪರಿಸ್ಥಿತಿಗಳ ದೃಷ್ಟಿಯಿಂದ ದುಆ ಮತ್ತು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲು ಆಜ್ಞಾಪನೆ.**

ಅಲ್ಲಾ ತಾಲಾಗೆ ಹತ್ತಿರವಾಗಲು ಪ್ರಯತ್ನಿಸುವುದು ಅತ್ಯಂತ ಮುಖ್ಯವಾದ ಅಂಶವಾಗಿದೆ. ಅವನ ಅನುಮೋದನೆಯನ್ನು ಪಡೆಯಲು ಪ್ರಯತ್ನಿಸಿ. ಅವನೊಂದಿಗೆ ಸಂಬಂಧ ಹೊಂದಲು ಪ್ರಯತ್ನಿಸಿ, ಆ ಸಂಬಂಧದಲ್ಲಿ ಬೆಳೆಯಲು ಪ್ರಯತ್ನಿಸಿ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **22-11-2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹುದೈಬಿಯಾ ಸಂಧಿಗೆ ಸಂಬಂಧಿಸಿ ಪ್ರಸ್ತಾಪಿಸಲಾಗುತ್ತಿತ್ತು. ಈ ಕುರಿತು ಬುದೈಲ್ ಬಿನ್ ವರ್‌ಖಾ ಖುಝಾಯೀ ಮತ್ತು ಇತರ ಖುರೈಶಿ ನಾಯಕರು ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದ ಬಗ್ಗೆ ಪ್ರಸ್ತಾಪವಿದೆ. ಇದನ್ನು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೀಗೆ ವಿವರಿಸಿರುವರು: ಹಝ್ರತ್ ಪೈಗಂಬರ್(ಸ) ಹುದೈಬಿಯಾ ಕಣಿವೆಗೆ ತಲುಪಿ ಡೇರೆ ಹಾಕಿದ ನಂತರ ಖುಝಾಅ ಗೋತ್ರದ ಒಬ್ಬ ಪ್ರಸಿದ್ಧ ನಾಯಕ ಬುದೈಲ್ ಬಿನ್ ವರ್‌ಖಾ ಎಂಬವರು ತನ್ನ ಕೆಲವು ಸಂಗಡಿಗರ ಜೊತೆಗೆ ಹಝ್ರತ್ ಪೈಗಂಬರ್(ಸ)ರನ್ನು ಭೇಟಿಯಾಗಲು ಬಂದರು. ಅವರು ಬಂದು ಹೀಗೆ ಹೇಳಿದರು: ಮಕ್ಕಾದ ಸರದಾರರು ಯುದ್ಧಕ್ಕಾಗಿ ತಯಾರಾಗಿ ನಿಂತಿರುವರು. ಅವರು ಎಂದಿಗೂ ನಿಮ್ಮನ್ನು ಮಕ್ಕಾದಲ್ಲಿ ಪ್ರವೇಶಿಸಲು ಬಿಡಲಾರರು.

ಹಝ್ರತ್ ಪೈಗಂಬರ್(ಸ) ಹೇಳಿದರು: "ನಾವು ಯುದ್ಧ ಮಾಡುವ ಉದ್ದೇಶದಿಂದ ಬಂದಿಲ್ಲ. ನಾವು ಕೇವಲ ಉಮ್ರ ಮಾಡುವ ಉದ್ದೇಶದಿಂದ ಬಂದಿದ್ದೇವೆ. ಮಕ್ಕಾದ ಖುರೈಶಿಯರನ್ನು ಯುದ್ಧದ ಬೆಂಕಿ ಸುಟ್ಟು ಬೂದಿಯನ್ನಾಗಿ ಮಾಡಿದೆಯಾದರೂ ಈ ಜನರು ಹಿಂದೆ ಸರಿಯುತ್ತಿಲ್ಲ ಎಂಬುದು ದುಃಖಕರ. ಅವರು ನನ್ನ ವಿರುದ್ಧ ಯುದ್ಧ ಮಾಡುವುದನ್ನು ನಿಲ್ಲಿಸಿ ನನ್ನನ್ನು ಇತರ ಜನರಿಗಾಗಿ ಬಿಟ್ಟು ಬಿಡುವ ಸಂಧಿಗೂ ನಾನು ತಯಾರಿದ್ದೇನೆ. ಆದರೆ ಅವರು ನನ್ನ ಈ ಸಲಹೆಯನ್ನು ಸಹ ನಿರಾಕರಿಸಿ ಯುದ್ಧದ ಬೆಂಕಿ ಉರಿಯುವಂತೆ ಮಾಡುವುದಾದರೆ, ಯಾರ ಕೈಯಲ್ಲಿ ನನ್ನ ಜೀವವಿದೆಯೋ ಆ ಅಲ್ಲಾಹನ ಆಣೆ, ನಾನು ಕೂಡ ಈ ಹೋರಾಟದಿಂದ ಹಿಂದೆ ಸರಿಯುವುದಿಲ್ಲ. ಒಂದೋ ನನ್ನ ಜೀವ ಈ ಮಾರ್ಗದಲ್ಲಿ ಬಲಿದಾನವಾಗುವುದು, ಇಲ್ಲದಿದ್ದರೆ ಅಲ್ಲಾಹನು ನನಗೆ

ವಿಜಯವನ್ನು ನೀಡುವನು."

ನಾನು ಅವರ ವಿರುದ್ಧದ ಹೋರಾಟದಲ್ಲಿ ಮೃತಪಟ್ಟರೆ, ಅಲ್ಲಿಗೆ ಕಥೆ ಮುಗಿಯಿತು. ಆದರೆ ಅಲ್ಲಾಹನು ನನಗೆ ವಿಜಯವನ್ನು ದಯಪಾಲಿಸಿದರೆ ಮತ್ತು ನಾನು ತಂದ ದೀನಿಗೆ ವಿಜಯ ಲಭಿಸಿದರೆ, ಅನಂತರ ಮಕ್ಕಾದ ಜನರು ವಿಶ್ವಾಸ ಕೈಗೊಳ್ಳುವುದರಲ್ಲಿ ತಡಮಾಡಬಾರದು. ಹಝ್ರತ್ ಪೈಗಂಬರ್(ಸ)ರ ಈ ಪ್ರಾಮಾಣಿಕ ಮತ್ತು ನೋವಿನ ಮಾತಿನ ಪ್ರಭಾವ ಬಹಳಷ್ಟು ಮಟ್ಟಿಗೆ ಬುದ್ಯೆಲ್‌ನ ಮೇಲೆ ಉಂಟಾಯಿತು. ಆದ್ದರಿಂದ ಅವರು ಹೀಗೆ ವಿನಂತಿಸಿಕೊಂಡರು: ನನಗೆ ಸ್ವಲ್ಪ ಸಮಯ ನೀಡಿರಿ ಇದರಿಂದ ನಾನು ಮಕ್ಕಾಗೆ ಹೋಗಿ ನಿಮ್ಮ ಸಂದೇಶವನ್ನು ತಲುಪಿಸಿ ಅವರನ್ನು ಸಂಧಿಗೆ ರಾಜಿ ಮಾಡಿಕೊಳ್ಳಲು ಪ್ರಯತ್ನಿಸುತ್ತೇನೆ. ಅದಕ್ಕೆ ಅವರು(ಸ) ಅನುಮತಿ ನೀಡಿದರು ಮತ್ತು ಬುದ್ಯೆಲ್ ತನ್ನ ಗೋತ್ರದ ಕೆಲವು ಜನರನ್ನು ಕರೆದುಕೊಂಡು ಮಕ್ಕಾಗೆ ಹೊರಟರು. ಬುದ್ಯೆಲ್ ಬಿನ್ ವರ್ಖಾ ಅವರು ಮಕ್ಕಾಕ್ಕೆ ಆಗಮಿಸಿದಾಗ, ಅವರು ಖುರೈಷಿಗಳನ್ನು ಒಟ್ಟುಗೂಡಿಸಿ ಹಗೆ ಹೇಳಿದರು: ನಾನು ಆ ವ್ಯಕ್ತಿ ಅಂದರೆ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್......... ಅವರ ಬಳಿಯಿಂದ ಬರುತ್ತಿದ್ದೇನೆ ಮತ್ತು ಅವರು ನನಗೆ ಒಂದು ಪ್ರಸ್ತಾಪವನ್ನು ಮಂಡಿಸಿದರು. ಅದಕ್ಕೆ ನೀನು ನನ್ನನ್ನು ಅನುಮತಿ ನೀಡಿದರೆ ನಾನು ಅದನ್ನು ಪ್ರಸ್ತಾಪಿಸುತ್ತೇನೆ. ಈ ಬಗ್ಗೆ ಉತ್ಸಾಹಿ ಮತ್ತು ಬೇಜವಾಬ್ದಾರಿಯುಳ್ಳ ಕೆಲವು ಖುರೈಶ್ ಜನರು ಹೇಳಿದರು: ಆ ವ್ಯಕ್ತಿಯಿಂದ ನಾವು ಏನನ್ನೂ ಕೇಳಲು ಸಿದ್ಧರಿಲ್ಲ> ಅಂದರೆ ಹಝ್ರತ್ ಪೈಗಂಬರ್(ಸ)ರ ಯಾವ ಪ್ರಸ್ತಾವನೆಯೂ ಆಲಿಸಲು ಸಿದ್ಧರಿಲ್ಲ" ಆದರೆ ಅಲ್ಲಿದ್ದ ಬುದ್ಧಿಶಾಲಿಗಳು ಹೇಳಿದರು ನಮಗೆ ಅವರ ಪ್ರಸ್ತಾವನೆ ತಿಳಿಸಿರಿ. ಆದ್ದರಿಂದ ಬುದ್ಯೆಲ್ ಹಝ್ರತ್ ಪೈಗಂಬರ್(ಸ)ರು ಮಾಡಿದ ಸಲಹೆಯನ್ನು ಪುನರುಚ್ಚರಿಸಿದರು. ಆಗ ಮಕ್ಕಾದಲ್ಲಿ ಇದ್ದ ಸಖೀಫ್ ಗೋತ್ರದ ಒಬ್ಬ ಪ್ರಭಾವಶಾಲಿ ನಾಯಕನಾದ ಉರ್ವ ಬಿನ್ ಮಸ್‌ಊದ್ ಎಂಬ ವ್ಯಕ್ತಿ ಎದ್ದುನಿಂತು ಪ್ರಾಚೀನ ಅರೇಬಿಕ್ ಶೈಲಿಯಲ್ಲಿ ಖುರೈಶಿಗಳನ್ನು ಉದ್ದೇಶಿಸಿ ಹೇಳಿದರು. ಓ ಜನರೇ! ನಾನು ನಿಮ್ಮ ತಂದೆಯಂತಲ್ಲವೇ? ಅದಕ್ಕೆ ಅವರು 'ಹೌದು' ಎಂದರು. ಆಗ ಅವರು ಹೇಳಿದರು: ನೀವು ನನ್ನ ಮಕ್ಕಳಂತೆ ಅಲ್ಲವೇ? ಹೌದು ನಾವು ನಿಮ್ಮ ಮಕ್ಕಳಿದ್ದಂತೆ. ಆಗ ಉರ್ವಾ ಹೇಳಿದರು: ನಿಮಗೆ ನನ್ನ ಮೇಲೆ ಯಾವುದೇ ರೀತಿಯ ಅಪನಂಬಿಕೆ ಇದೆಯೇ?ಖುರೈಶರು ಹೇಳಿದರು ಖಂಡಿತವಾಗಿಯೂ ಇಲ್ಲ. ಹಾಗಾದರೆ ಆ ವ್ಯಕ್ತಿ (ಮುಹಮ್ಮದ್(ಸ)) ನಿಮಗೆ ಅತ್ಯುತ್ತಮವಾದ ವಿಷಯವನ್ನು ಪ್ರಸ್ತುತಪಡಿಸಿದ್ದಾರೆ ಎಂದು ನಾನು ಭಾವಿಸುತ್ತೇನೆ. ನೀವು ಈ ಸಲಹೆಯನ್ನು ಅಂಗೀಕರಿಸಬೇಕು. ನಿಮ್ಮ ಪರವಾಗಿ ಮುಹಮ್ಮದ್(ಸ)ರ ಬಳಿಗೆ ಹೋಗಿ ಇನ್ನಷ್ಟು ಮಾತುಕತೆ ನಡೆಸಲು ನನಗೆ ಅನುಮತಿ ಕೊಡಿರಿ. ಅದಕ್ಕೆ ಖುರೈಶರು ನಿಸ್ಸಂದೇಹವಾಗಿ ನೀವು ಹೋಗಿರಿ ಮತ್ತು ಮಾತನಾಡಿರಿ ಎಂದು ಹೇಳಿದರು. (ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್‌ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ-755-756)

ಉರ್ವಾ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ಗೋದನು. ಅದರ ವಿವರಣೆಯಲ್ಲಿ ಹೀಗೆ ಬರೆಯಲಾಗಿದೆ, ಉರ್ವಾ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ಬಂದು ಹೇಳಿದನು: ಓ ಮುಹಮ್ಮದ್(ಸ)! ನಾನು ಕಅಬ್ ಬಿನ್ ಲವ್ವ ಮತ್ತು ಆಮಿರ್ ಬಿನ್ ಲವ್ವ ಅವರನ್ನು ಹುದೈಬಿಯಾದ ನೀರಿನ ಬಳಿ ಬಿಟ್ಟಿರುವೆನು. ಅವರೊಂದಿಗೆ ಹಾಲು ಕೊಡುವ ಒಂಟೆಗಳಿವೆ. ಅವರು ಅಹಾಬಿಶ್ ಮತ್ತು ಅವರ ಅನುಯಾಯಿಗಳನ್ನು ಕರೆಸಿದ್ದೇನೆ (ಅಹಾಬಿಶ್ ಖುರೈಶ್‌ನ ಮಿತ್ರ ಗೋತ್ರದವರಾಗಿದ್ದರು, ಅವರು ಹಬ್ಶಿ ಎಂಬ ಬೆಟ್ಟದ ಬುಡದಲ್ಲಿ ಪ್ರಮಾಣ ಮಾಡಿದ್ದರು, ಆದ್ದರಿಂದ ಈ ಜನರು ಅಹಾಬಿಶ್ ಎಂದು ಕರೆಯಲ್ಪಟ್ಟರು) ಮತ್ತು ಅವನು ಹೇಳತೊಡಗಿದ. ಅವರು ಚಿರತೆಯ ಚರ್ಮವನ್ನು ಧರಿಸಿದ್ದಾರೆ, ಅಂದರೆ ಈ ಅವಿಶ್ವಾಸಿಗಳು ಚಿರತೆಯ ಚರ್ಮವನ್ನು ಧರಿಸಿದ್ದಾರೆ, ಯುದ್ಧಕ್ಕೆ ಸಿದ್ಧರಾಗಿದ್ದಾರೆ ಮತ್ತು ನೀವು ಅವರನ್ನು ಕೊಲ್ಲುವವರೆಗೂ ಅವರು ಬೈತುಲ್ಲಾಹ್ ಮತ್ತು ನಿಮ್ಮ ನಡುವೆ ಯಾವ ಮಾರ್ಗವು ಬಿಡುವುದಿಲ್ಲ ಎಳದು ಪ್ರತಿಜ್ಞೆ ಮಾಡಿದ್ದಾರೆ ಅಂದರೆ, ಹಝ್ರತ್ ಪೈಗಂಬರ್(ಸ)ರು ಅವರನ್ನು ಕೊಲ್ಲಬೇಕು. ಅವನು ತನ್ನ ಮಾತನ್ನು ಮುಂದುವರಿಸುತ್ತಾ ಹೇಳಿದನು: ನಿಮ್ಮ ಮತ್ತು ನೀವು ಯಾರೊಂದಿಗೆ ಯುದ್ಧವಾಡುವಿರೋ ನಿಮ್ಮಿಬ್ಬರ ನಡುವೆ ಎರಡು ವಿಷಯಗಳಲ್ಲಿ ಒಂದು ವಿಷಯ ನಿಶ್ಚಯವಾದೆ. ಅವನು ಹಝ್ರತ್ ಪೈಗಂಬರ್(ಸ)ರಿಗೆ ಹೇಳತೊಡಗಿದನು ಒಂದೋ ನೀವು ನಿಮ್ಮ ಸಮುದಾಯವನ್ನು ನಾಶಮಾಡುತ್ತೀರಿ ಮತ್ತು ಒಬ್ಬ ವ್ಯಕ್ತಿಯು ತನ್ನ ಸಮುದಾಯವನ್ನು ನಾಶಪಡಿಸಿದನು ಮತ್ತು ಅವನ ಕುಟುಂಬವನ್ನು ಕೊಂದನು ಎಂದು ಕೇಳಲಾಗಿಲ್ಲ. ಅಥವಾ ನಿಮ್ಮ ಜೊತೆಗಿರುವವರು ನಿಮ್ಮನ್ನು ಅವಮಾನಿಸುತ್ತಾರೆ. ಅದೇನೆಂದರೆ, ನಿಮ್ಮ ಜೊತೆಗಿರುವ ಇವರು ಹೇಡಿಗಳು ಎಂದು ಹೆದರಿಸಲು ಸಹ ಅವನು ಪ್ರಯತ್ನಿಸಿದನು. ಅವನು ಹೇಳಿದನು, ಅಲ್ಲಾಹನ ಆಣೆ! ನಾನು ನಿಮ್ಮೊಂದಿಗೆ ನೋಡುತ್ತಿರುವ ವಿಭಿನ್ನ ಮುಖಗಳು ಅವು ಓಡಿಹೋಗುವವರ ಮುಖಗಳಾಗಿವೆ, ಅವನು ಸಹಾಬಿಗಳ ಬಗ್ಗೆ ತಪ್ಪು ಕಲ್ಪನೆ ಹೊಂದಿದ್ದನು. ಮತ್ತೊಂದು ವರದಿಯ ಪ್ರಕಾರ ಹೀಗಿದೆ: ಈ ಜನರಲ್ಲಿ ನಾನು ಗುರುತಿಸದ ಮುಖಗಳು ಅಥವಾ ಅವರ ವಂಶಾವಳಿ ಮತ್ತು ನೀತಿವಂತರಿಲ್ಲ. ಅವರು ಓಡಿಹೋಗುತ್ತಾರೆ ಮತ್ತು ನಿಮ್ಮನ್ನು ಬಿಟ್ಟು ಹೋಗುತ್ತಾರೆ ಎಂದು ನಾನು ಭಾಸವಾಗುತ್ತಿದೆ ಮತ್ತೊಂದು ವರದಿಯ ಪ್ರಕಾರ ನೀವು ಖುರೈಷಿಗಳೊಂದಿಗೆ ಹೋರಾಡಿದರೆ ಅವರು ನಿಮ್ಮನ್ನು ಖುರೈಷಿಗಳಿಗೆ ಒಪ್ಪಿಸುತ್ತಾರೆ ಎಂದು ನಾನು ನೋಡುತ್ತೇನೆ ಎಂದು ವರದಿಯಾಗಿದೆ. ಈ ರೀತಿಯಾಗಿ, ಅವನು ಹಝ್ರತ್ ಪೈಗಂಬರ್(ಸ) ಪ್ರಭಾವಿತಗೊಳಿಸಲು ಮತ್ತು ಬೆದರಿಸಲು ಪ್ರಯತ್ನಿಸಿದನು. ಮತ್ತು ಅವರು ನಿಮ್ಮನ್ನು ಖೈದಿಯನ್ನಾಗಿ ಮಾಡುತ್ತಾರೆ, ಅದಕ್ಕಿಂತ ಹೆಚ್ಚೇನಾಗಬೇಕು? ಆಗ ಹಝ್ರತ್ ಪೈಗಂಬರ್(ಸ) ರ ಹಿಂದೆ ಕುಳಿತಿದ್ದ ಹಝ್ರತ್ ಅಬೂಬಕರ್(ರ.ಅ) ಕೋಪಗೊಂಡು ಹೇಳಿದರು: ನೀನು ನಿನ್ನ ವಿಗ್ರಹವಾದ ಲಾತ್ ಅನ್ನು ಚುಂಬಿಸು ಅಂದರೆ ಅದನ್ನು ಪೂಜಿಸು. ಈ ಮಾತುಗಳನ್ನು ನಮ್ಮೊಂದಿಗೆ ಆಡಬೇಡ. ನಾವು ಹಝ್ರತ್ ಪೈಗಂಬರ್(ಸ)ರನ್ನು ಬಿಡುತ್ತೇವೆಯೇ?

ಆಗ ಉರ್ವಾ ಹೇಳಿದನು ಇವರು ಯಾಡು? ಅವರು ಅಬೂಬಕರ್ ಎಂದು ಉತ್ತರಿಸಿದರು. ಆದುದರಿಂದ ಉರ್ವಾ ಹೇಳಿದನು, ಅಲ್ಲಾಹನ ಆಣೆ! ನೀನು ನನಗೆ ಉಪಕಾರ ಮಾಡದಿದ್ದರೆ ನಾನು ಅದಕ್ಕೆ ಉತ್ತರಿಸುತ್ತಿದ್ದೆ. ಒಂದು ಕಾಲದಲ್ಲಿ ಉರ್ವಾ ಹಝ್ರತ್ ಅಬುಬಕರ್(ರ) ಅವರಿಂದ ಒಲವು ಹೊಂದಿದ್ದನು. ಅದರ ಬಗ್ಗೆ ಹೀಗೆ ಬರೆಯಲಾಗಿದೆ: ಪರಿಹಾರದನ ನೀಡಲು ಉರ್ವಾ ಬೆಂಬಲ ಕೇಳಿದ್ದನು. ಯಾರನ್ನೋ ಆತನು ಕೊಂಡಿದ್ದನು ಅದಕ್ಕೆ ಅದರ ಪರಿಹಾರಧನ ನೀಡಬೇಕಾಗಿತ್ತು ಅದಕ್ಕೆ ಬೆಂಬಲ ಕೇಳಿದ್ದನು ಆಗ ಆತನಿಗೆ ಯಾರೊಬ್ಬರು ಎರಡು ಅಥವಾ ಮೂರು ಒಂಟೆಗಳನ್ನು ನೀಡಿ ಸಹಕರಿಸಿದ್ದರು ಆದರೆ ಹಝ್ರತ್ ಅಬೂಬಕರ್(ರ) ಅವನನ್ನು ಹತ್ತು ಒಂಟೆಗಳನ್ನು ನೀಡಿ ಸಹಕರಿಸಿದ್ದರು. ಇದು ಹಝ್ರತ್ ಅಬೂಬಕರ್(ರ) ಉರ್ವಾಗೆ ಮಾಡಿದ ಉಪಕಾರವಾಗಿದೆ.

**(ಮುಂದುವರಿಯುವುದು)**

------------*****------------

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಪೂಝಾತ್ ಮತ್ತು ಬರವಣಿಗೆಗಳಲ್ಲದೆ ಹುಝೂರ್ ಅನ್ವರ್(ಅತಬಅ)ರವರ ಹೊಸ ಖುತ್‌ಬ ಜುಮುಅ, ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಅ ಪ್ರಶ್ನೋತ್ತರದ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ. **(ಸಂಪಾದಕರು)**

**'ಬದರ್' ವಾರಪತ್ರಿಕೆಯನ್ನು Online ಮುಖಾಂತರ ಓದಲು ಸಂಪರ್ಕಿಸಿ ನಮ್ಮ ವೆಬ್‌ಸೈಟ್:**
**https://akhbarbadr.in/Kannada/#gsc.tab=0**

**MUSLIM TELEVISION AHMADIYYA INTERNATIONAL**
**www.mta.tv**

## ತಫ್ಸೀರೆ ಕಬೀರ್

**ಮೂಮಿನ್‌ಗಳ (ಧರ್ಮನಿಷ್ಠರ) ಮಕ್ಕಳು ಮೂಮಿನ್‌ಗಳಾಗಿದ್ದರೆ, ಅವರು ತಮ್ಮ ಹೆತ್ತವರೊಂದಿಗೆ ಸ್ವರ್ಗದಲ್ಲಿ ಮತ್ತೆ ಸೇರುತ್ತಾರೆ ಮಕ್ಕಳ ಸಂಕಟಗಳು ಪೋಷಕರ ಮೇಲೆ ಪರಿಣಾಮ ಬೀರುತ್ತದೆ, ಅವರನ್ನು ಈ ಸಂಕಟದಿಂದ ಪಾರು ಮಾಡಲು ಸರ್ವಶಕ್ತನಾದ ಅಲ್ಲಾಹನು ಹಿರಿಯರ ಮಕ್ಕಳನ್ನು ಒಳ್ಳೆಯತನದಿಂದ ನಡೆಸಿಕೊಳ್ಳುತ್ತಾನೆ.**

ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಃ ಅನ್ನಹಲ್ ಆಯತ್ 120 **ಸುಮ್ಮ ಇನ್ನ ರಬ್ಬಕ ಲಿಲ್ಲಝೀನ ಅಮಿಲುಸ್ಸೂಅ ಬಿಜಹಾಲತಿನ್ ಸುಮ್ಮ ತಾಬೂ ಮಿವ್ ಬಅದಿ ಝಾಲಿಕ ವ ಅಸ್ಲಿಹೂ; ಇನ್ನ ರಬ್ಬಕ ಮಿವ್ ಬಅ್‌ದಿಹಾ ಲಗಫೂರುರ್ರಹೀಮ್**. (ಅಂದರೆ: ಅನಂತರ, ಅಜ್ಞಾನ ಕಾರಣದಿಂದ ದುಷ್ಟವಾಗಿ ವರ್ತಿಸಿ ಆ ಬಳಿಕ ಪಶ್ಚಾತ್ತಾಪಪಟ್ಟು ಜೀವನವನ್ನು ಸರಿಪಡಿಸಿಕೊಂಡವರಿಗೆ ಖಂಡಿತವಾಗಿಯೂ ನಿನ್ನ ಪ್ರಭು ಬಹಳ ಕ್ಷಮಾಶೀಲನೂ ಕಾರುಣ್ಯವಂತನೂ ಆಗಿದ್ದಾನೆ.) ನ ವ್ಯಾಖ್ಯಾನದಲ್ಲಿ ಹೇಳುತ್ತಾರೆ:

ಅದಕ್ಕೂ ಮುನ್ನ ಸರ್ವಶಕ್ತನಾದ ಅಲ್ಲಾಹನು ಹೇಳಿದನು ಯಹೂದಿಗಳು ಅವಿಧೇಯರಾದರು, ಅದಕ್ಕಾಗಿಯೇ ಅವರ ಮೇಲೆ ಕಷ್ಟಗಳು ಬಂದವು, ಅಲ್ಲಾಹನು ಹೇಳಿದಂತೆ, **ವಲಾಕಿನ್ ಕಾನೂ ಅನ್‌ಫುಸಹುಮ್ ಯಝ್ಲಿಮೂನ** ಅಂದರೆ ಅವರು ಸ್ವತಃ ಹಿಂಸಿಸುತ್ತಿದ್ದರು ಆದ್ದರಿಂದಲೇ ಅವರೂ ಸಹ ಹಿಂಸೆಯನ್ನು ಅನುಭವಿಸಿದರು. ಆಗ ಹೇಳಿದನು ಯಹೂದಿಯರು ತಪ್ಪುಗಳನ್ನು ಮಾಡಿದ್ದರು ಅವರು ಈಗಲೂ ಅದರ ಬಗ್ಗೆ ಪಶ್ಚಾತ್ತಾಪಪಟ್ಟರೆ, ಅವರು ಅಲ್ಲಾಹನನ್ನು ಕ್ಷಮಿಸುವ, ಕರುಣಾಮಯಿಯಾಗಿ ಕಾಣಬಹುದು. ಇದರಲ್ಲಿ ಯಹೂದಿಗಳಿಗೆ ಯಾವುದೇ ವಿಶೇಷ ಅರ್ಥವನ್ನು ಹೊಂದಿಲ್ಲ, ಆದರೆ ಇದು ಸಾಮಾನ್ಯ ಕಾನೂನಿಗೆ ಅನುಸಾರವಾಗಿದೆ.

ಮಕ್ಕಳ ಸಂಕಟಗಳು ತಂದೆ–ತಾಯಿಯರ ಮೇಲೆ ಹೇಗೆ ಪರಿಣಾಮ ಬೀರುತ್ತದೆ, ಮಕ್ಕಳ ಅನಾರೋಗ್ಯದ ಕಾರಣದಿಂದ ತಂದೆ–ತಾಯಿಗೆ ಹೇಗೆ ಸಂಕಟವುಂಟಾಗುತ್ತದೆಯೋ ಅದೇ ರೀತಿ ಅವರು ನರಕಕ್ಕೆ ಬೀಳುವುದರಿಂದ ತಂದೆ–ತಾಯಿಯರಿಗೆ ನೋವಾಗುತ್ತದೆ. ರಸೂಲುಲ್ಲಾಹ್(ಸ)ರವರ ಬಗ್ಗೆ ಬರುತ್ತದೆ ಖಿಯಾಮತ್ ದಿವಸ ಕೆಲವು ಬಾಹ್ಯವಾಗಿ ಸಹಾಬಿಯರು ಎಂದು ತೋರುವ ಜನರು ನರಕದಲ್ಲಿ ಹೋಗುತ್ತಿರುವಾಗಿ ಕಂಡು 'ಸಹಾಬಿ' 'ಸಹಾಬಿ' ಎಂದು ಹೇಳಲಾಗುವುದು. (ಬುಖಾರಿ, ಸಂಪುಟ 3, ಕಿತಾಬ್ ಅಲ್–ತಫ್ಸೀರ್, ಅಧ್ಯಾಯ, **ನಕುಂತು ಅಲೈಹಿಮ್ ಶಹೀದ**) ಆದ್ದರಿಂದ, ಅವರನ್ನು ದುಃಖದಿಂದ ರಕ್ಷಿಸಲು, ಸರ್ವಶಕ್ತನಾದ ಅಲ್ಲಾಹನು ವೃದ್ಧರ ಮಕ್ಕಳನ್ನು ಒಳ್ಳೆಯತನದಿಂದ ನಡೆಸುತ್ತಾನೆ ಮತ್ತು ಈ ಹಿರಿಯರನ್ನು ದುಃಖದಿಂದ ರಕ್ಷಿಸಲು ಅವರ ಮಕ್ಕಳನ್ನು ಸಂರಕ್ಷಿಸಲಾಗುತ್ತದೆ. ಅಲ್ಲಾಹನು ಸರ್ವಶಕ್ತನು ಹೇಳುವಂತೆ **ಅಲ್‌ಹಖ್ನಾಬಿಹಿಮ್ ಝುರ್ರಿಯತುಹುಮ್** ಅಂದರೆ ನಾವು ಮೂಮಿನರ (ಧರ್ಮನಿಷ್ಠರ) ಮಕ್ಕಳನ್ನು ಅವರು ಮುಮಿನ್ ಆಗಿದ್ದರೆ ಸ್ವರ್ಗದಲ್ಲಿ ಅವರೊಂದಿಗೆ ಸೇರಿಸುತ್ತೇವೆ ಮಕ್ಕಳ ಸ್ಥಾನಮಾನವು ಕಡಿಮೆಯಾದರೂ ಸಹ ನಾವು ಅವರ ಮಕ್ಕಳನ್ನು ಸ್ವರ್ಗದಲ್ಲಿ ಸೇರುವಂತೆ ಮಾಡುತ್ತೇವೆ. ಆದ್ದರಿಂದ, ಪ್ರವಾದಿಗಳು ಮತ್ತು ಶಾಂತಿ ಸ್ಥಾಪಕರ ಜಮಾಅತ್‌ಗಳು ಮತ್ತು ಸಮುದಾಯಗಳಿಗೆ ಪವಿತ್ರ ಖುರ್‌ಆನ್‌ನಲ್ಲಿ ಪುನರಾವರ್ತಿತ ವಾಗ್ದಾನಗಳಿವೆ, ಆದ್ದರಿಂದ ಅವರ ಮೇಲೆ ವಿಶೇಷ ಅನುಗ್ರಹವಿರುತ್ತದೆ, ಅವರು ಸಂಕಟವನ್ನು ಅನುಭವಿಸಿದರೆ ಪ್ರವಾದಿಗಳಿಗೆ ಮತ್ತು ಶಾಂತಿ ಸ್ಥಾಪಕರಿಗೆ ದುಃಖವಾಗುತ್ತದೆ ಮತ್ತು ಎಲ್ಲಾ ಸಮೂದಾಯಗಳ ಕಡೆಗೆ ಪ್ರವಾದಿಗಳು ಬಂದಿದ್ದಾರೆ ಎಂದು ಪವಿತ್ರ ಖುರ್‌ಆನ್‌ನಿಂದ ತಿಳಿದುಬರುತ್ತದೆ. ಆದ್ದರಿಂದ ಇಡೀ ಪ್ರಪಂಚವು ಈ ಅನುಗ್ರಹದಲ್ಲಿ ಭಾಗಿಯಾಗಿದೆಯೇ ಹೊರತು ಯಹೂದಿಗಳಿಗೆ ಮಾತ್ರ ಪ್ರತ್ಯೇಕತೆಯಿಲ್ಲ:

**ಸುಮ್ಮ ಇನ್ನ ರಬ್ಬಕ ಲಿಲ್ಲಝೀನ ಅಮಿಲುಸ್ಸೂಅ ಬಿಜಹಾಲತಿನ್**. ಅಜ್ಞಾನವು ಜ್ಞಾನಕ್ಕೆ ವಿರುದ್ಧವಾಗಿದೆ ಮತ್ತು ಅದರ ಅರ್ಥ ಅಜ್ಞಾನವಾಗಿದೆ. ನಿಘಂಟಿನಲ್ಲಿ ಈ ರೀತಿ ಇದೆ, **ಅಲ್‌ಜಹಾಲತು ಝಿದ್ದುಲ್ ಇಲ್ಮಿ** ಅದೇ ರೀತಿಯಲ್ಲಿ, ಇದನ್ನು ಬರೆಯಲಾಗಿದೆ: **ಅಲ್‌ಜಹಾಲತು ಝಿದ್ದುಲ್ ಇಲ್ಮಿ ವಲ್‌ಮಾರಿಫತಿ** ಅಂದರೆ (ಜಹಾಲತ್) ಅಜ್ಞಾನವು ಜ್ಞಾನದ ವಿರುದ್ಧವಾಗಿದೆ ಮತ್ತು ಅಲ್–ಜಹಾಲತ್ ಅಂದರೆ, ಅಜ್ಞಾನ ಮತ್ತು ಜ್ಞಾನದ ಕೊರತೆ ಎಂದಾಗಿದೆ. ಈ ಸ್ಥಳದಲ್ಲಿ, ಇದು ಜ್ಞಾನದ ಕೊರತೆ ಎಂದು ಅರ್ಥವಲ್ಲ, ಏಕೆಂದರೆ ಜ್ಞಾನವಿಲ್ಲದವನು ಶಿಕ್ಷಿಸಲ್ಪಡುವುದಿಲ್ಲ, ಆದರೆ ಅದು ಜ್ಞಾನದ ಕೊರತೆಯಾಗಿದೆ ಅಂದರೆ ಆದೇಶವಿದೆ, ಆದರೆ ಧರ್ಮನಿಷ್ಠೆಯ ದೌರ್ಬಲ್ಯದಿಂದಾಗಿ, ಈ ವ್ಯಕ್ತಿಯು ಸಮಯಕ್ಕೆ ತನ್ನನ್ನು ನಿಯಂತ್ರಿಸಲು ಸಾಧ್ಯವಾಗಲಿಲ್ಲ. ಅಂತಹ ವ್ಯಕ್ತಿಯು ಶಿಕ್ಷೆಗೆ ಅರ್ಹನಾಗಿರುತ್ತಾನೆ ಏಕೆಂದರೆ ಜ್ಞಾನದ ನಂತರ ಧಾರ್ಮಿಕತೆಯನ್ನು ಸಾಧಿಸಲು ಪ್ರಯತ್ನಿಸದಿರುವುದು ಉದ್ದೇಶಪೂರ್ವಕ ಪಾಪವಾಗಿದೆ.

***(ಪುಟ ಸಂಖೆ 07 ರಲ್ಲಿ ಮುಂದುವರಿಸಲಾಗಿದೆ)***

## ವಿಶೇಷ ಪ್ರಾರ್ಥನೆಗಳಿಗಾಗಿ ಮನವಿ

ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್ಮಹುಲ್ಲಾಹ್) ಕಂಡ ಒಂದು ಕನಸಿನ ಆಧಾರದಲ್ಲಿ ಅಮೀರುಲ್ ಮುಅ್‌ಮಿನೀನ್ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಖಲೀಫತುಲ್ ಮಸೀಹ್ ಖಾಮಿಸ್(ಅಯ್ಯದಹುಲ್ಲಾಹ್) ಜಮಾಅತ್ ಬಾಂಧವರಿಗೆ ವಿಶೇಷ ಪ್ರಾರ್ಥನೆಗಳನ್ನು ಮಾಡಲು ಮನವಿ ಮಾಡುತ್ತಾ ಹೀಗೆ ಹೇಳಿದರು: ಜಮಾಅತ್ ಬಾಂಧವರು ಈ ಕೆಳಗಿನ ಪ್ರಾರ್ಥನೆಗಳನ್ನು ಮಾಡುತ್ತಾ ಇರುವುದಾದರೆ ಶೈತಾನನು ಎಂದಿಗೂ ಪ್ರವೇಶಿಸಲು ಸಾಧ್ಯವಾಗದಂತಹ ಒಂದು ಸುದೃಢ ಕೋಟೆಯಲ್ಲಿ ಅವರು ಸುರಕ್ಷಿತರಾಗುವರು. ಆ ಕೋಟೆಯ ಗೋಡೆಗಳು ಕಬ್ಬಿಣದ್ದಾಗಿವೆ ಮತ್ತು ಅದು ಆಕಾಶದ ವರೆಗೆ ತಲುಪಿವೆ. ಆದ್ದರಿಂದ ನುಸುಳಿ ಬಂದು ಆಕ್ರಮಣ ಮಾಡಲು ಶೈತಾನನಿಗೆ ಯಾವ ಮಾರ್ಗವೂ ಇರುವುದಿಲ್ಲ.

**ಸುಬ್‌ಹಾನಲ್ಲಾಹಿ ವಬಿಹಮ್ದಿಹಿ ಸುಬ್‌ಹಾನಲ್ಲಾಹಿಲ್ ಅಝೀಮ್ – ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಆಲಿ ಮುಹಮ್ಮದ್.**

ಜಮಾಅತಿನ ಪ್ರತಿಯೊಬ್ಬ ಹಿರಿಯ ಸದಸ್ಯರು ದಿನನಿತ್ಯ ಈ ಪ್ರಾರ್ಥನೆಯನ್ನು 200 ಬಾರಿ ಪಠಿಸಬೇಕು.
15 ರಿಂದ 25 ವಯಸ್ಸಿನ ಸದಸ್ಯರು ಇದನ್ನು ದಿನನಿತ್ಯ ಕನಿಷ್ಠ 100 ಬಾರಿ ಪಠಿಸಬೇಕು.
ಮಕ್ಕಳು ಕನಿಷ್ಠ 33 ಬಾರಿ ದಿನನಿತ್ಯ ಇದನ್ನು ಪಠಿಸಬೇಕು.
ಚಿಕ್ಕ ಮಕ್ಕಳಿಗೆ ಹೆತ್ತವರು 3–4 ಬಾರಿ ಹೇಳಿಕೊಡಬೇಕು.

2ನೇ ಪ್ರಾರ್ಥನೆ: ಇಸ್ತಿಗ್‌ಫಾರ್

**ಅಸ್ತಗ್‌ಫಿರುಲ್ಲಾಹ ರಬ್ಬೀ ಮಿನ್ ಕುಲ್ಲಿ ಧಂಬಿನ್ ವ ಅತೂಬು ಇಲೈಹಿ.**

100 ಬಾರಿ ದಿನನಿತ್ಯ ಪಠಿಸಬೇಕು.
ಹುಝೂರ್(ಅಯ್ಯದಹುಲ್ಲಾಹ್) ಹೇಳಿದರು: ನಾನು ಈ ಪ್ರಾರ್ಥನೆಯನ್ನು ಸಹ ಇದರಲ್ಲಿ ಸೇರಿಸುತಿದ್ದೇನೆ.

3ನೇ ಪ್ರಾರ್ಥನೆ:

**ರಬ್ಬಿ ಕುಲ್ಲು ಶೈಇನ್ ಖಾದಿಮುಕ ರಬ್ಬಿ ಫಹ್‌ಫಝ್‌ನೀ ವನ್‌ಸುರ್‌ನೀ ವರ್‌ಹಮ್‌ನೀ**

100 ಬಾರಿ ದಿನನಿತ್ಯ ಪಠಿಸಬೇಕು.

ಹುಝೂರ್(ಅಯ್ಯದಹುಲ್ಲಾಹ್) ಹೇಳಿದರು: "ಇತ್ತೀಚಿನ ದಿನಗಳಲ್ಲಿ ಶೈತಾನನು ನಾನಾ ರೀತಿಯಲ್ಲಿ ಜಮಾಅತಿನ ಮೇಲೂ ಮತ್ತು ಸಾಮೂಹಿಕ ನೆಲೆಯಲ್ಲೂ ನಮ್ಮ ಮೇಲೆ ಆಕ್ರಮಣ ಮಾಡಲು ಹವಣಿಸುತಿದ್ದಾನೆ. ಈ ಲೋಕದಲ್ಲಿ ಶೈತಾನನ ಆಕ್ರಮಣಗಳಿಂದ ರಕ್ಷಣೆ ಪಡೆಯಲು ಇರುವ ಒಂದೇ ಮಾರ್ಗವೇನೆಂದರೆ, ವಿಶೇಷವಾಗಿ ಪ್ರಾರ್ಥನೆಗಳಿಗೆ ಒತ್ತು ನೀಡುವುದಾಗಿದೆ. ಜಲ್ಸದ ದಿನಗಳಲ್ಲಿ ಮಾತ್ರವಲ್ಲ, ಬದಲಾಗಿ ಯಾವಾಗಲೂ ದುರೂದ್ ಪ್ರಾರ್ಥನೆ, ದೇವಸ್ಮರಣೆ ಮತ್ತು ಮೇಲಿನ ಪ್ರಾರ್ಥನೆಗಳನ್ನು ತಮ್ಮ ಜೀವಿತದ ಭಾಗವನ್ನಾಗಿ ಮಾಡಿಕೊಳ್ಳಬೇಕು ಮತ್ತು ಮಕ್ಕಳು, ಹಿರಿಯರು, ಸ್ತ್ರೀಯರು, ಪುರುಷರು ಪ್ರತಿಯೊಬ್ಬರು ಇದರ ಕಡೆಗೆ ಗಮನ ಕೊಡಬೇಕು. **(ಖುತ್ಬ ಜುಮುಅ 23 ಆಗಸ್ಟ್, 2024)**

## ತೆಹ್ರೀಕೆ ಜದೀದ್ ಯೋಜನೆಯ 91ನೇ ಹೊಸ ವರ್ಷದ ಭವ್ಯ ಘೋಷಣೆ

ನವೆಂಬರ್ 8, 2024 ರಂದು ಮಸ್ಜಿದ್ ಮುಬಾರಕ್ ಇಸ್ಲಾಮಬಾದ್, ಯುಕೆಯಲ್ಲಿ ತಮ್ಮ ವಿಶ್ವಾಸವರ್ಧಕ ಖುತ್‌ಬ ಜುಮುಅದಲ್ಲಿ ಸಯ್ಯಿದುನಾ ಹಝ್ರತ್ ಅಮೀರುಲ್ ಮುಮಿನೀನ್[ಅತಬಿಅ] ಅವರು ತೆಹ್ರೀಕ್-ಎ-ಜದೀದ್‌ನ 91ನೇ ಹೊಸ ವರ್ಷದ ಭವ್ಯ ಆರಂಭವನ್ನು ಘೋಷಿಸಿದ್ದಾರೆ ಎಂದು ಜಮಾಅತ್‌ನ ಸ್ನೇಹಿತರು ತಿಳಿದಿದ್ದಾರೆ.

ಪವಿತ್ರ ಖಲೀಫರುಗಳು ಪ್ರಾರಂಭಿಸಿದ ಎಲ್ಲಾ ಸ್ವಯಂಪ್ರೇರಿತ ಯೋಜನೆಗಳಲ್ಲಿ, ತೆಹ್ರೀಕ್-ಎ-ಜದೀದ್‌ನ ಸ್ಥಾನಮಾನವು ಬಹಳ ವಿಶಿಷ್ಟವಾಗಿದೆ. ತೆಹ್ರೀಕ್-ಎ-ಜದೀದ್‌ನ ಸಂಸ್ಥಾಪಕರಾದ ಸಯ್ಯಿದುನಾ ಹಝ್ರತ್ ಮುಸ್ಲೆಹ್ ಮೌಊದ್[ರ] ಅವರು ತೆಹ್ರೀಕ್-ಎ-ಜದೀದ್ ಯೋಜನೆಯನ್ನು "ಜಿಹಾದ್ ಕಬೀರ್" ಮತ್ತು ಆ ಯೋಜನೆಯಲ್ಲಿ ಭಾಗವಹಿಸಿದವರಿಗೆ ಬದರಿ ಸಹಾಬಗಳ ಪ್ರತಿಫಲವನ್ನು ಪಡೆಯುವವರು ಎಂದು ಘೋಷಿಸಿದ್ದಾರೆ. ಅಲ್ಲದೆ, ಅದನ್ನು ಪಾವತಿಸಲು ಬಲವಾಗಿ ಒತ್ತಿಹೇಳಲಾಗಿದೆ.

ಸಯ್ಯಿದುನಾ ಹಝ್ರತ್ ಮುಸ್ಲೆಹ್ ಮೌಊದ್[ರ] ಹೇಳಿದರು:

"ನಾನು ಈ ಚಂದಾವನ್ನು ಕಡ್ಡಾಯಗೊಳಿಸಿದ್ದೇನೆ. ಇದರಲ್ಲಿ ಭಾಗವಹಿಸುವುದು ಜಮಾಅತ್ ನ ಪ್ರತಿಯೊಬ್ಬ ಪುರುಷ ಮತ್ತು ಮಹಿಳೆಯ ಕರ್ತವ್ಯವಾಗಿದೆ."

(ಡೈಲಿ ಅಲ್-ಫಝ್ಲ್, ನವೆಂಬರ್ 5, 1963)

ಹಝ್ರತ್ ಮುಸ್ಲೆಹ್ ಮೌಊದ್[ರ] ತೆಹ್ರೀಕ್-ಎ-ಜದೀದ್‌ಗಾಗಿ ಆರ್ಥಿಕ ತ್ಯಾಗದ ಮಾನದಂಡವನ್ನು ವಿವರಿಸುತ್ತಾ ಹೇಳಿದರು:

"ಒಬ್ಬ ವ್ಯಕ್ತಿಯು ತನ್ನ ತಿಂಗಳ ಆದಾಯದ ಅರ್ಧ ಭಾಗವನ್ನು ಚಂದಾದಲ್ಲಿ ನೀಡಿದರೆ, ಉದಾಹರಣೆಗೆ, ಅವನು ನೂರು ರೂಪಾಯಿ ಆದಾಯವನ್ನು ಹೊಂದಿದ್ದರೆ, ಅವನು ಐವತ್ತು ರೂಪಾಯಿಗಳನ್ನು ಚಂದಾದಲ್ಲಿ ಬರೆಸಿದರೆ, ಅವನು ಒಳ್ಳೆಯ ತ್ಯಾಗ ಮಾಡಿದನೆಂದು ಪರಿಗಣಿಸಲಾಗುವುದು. ಅದೇ ರೀತಿಯಲ್ಲಿ ಅವನು ಒಂದು ತಿಂಗಳ ಸಂಪೂರ್ಣ ಆದಾಯವನ್ನು ಬರೆಸಿದರೆ, ಅಂದರೆ ನೂರಕ್ಕೆ ನೂರು ಬರೆಸಿದರೆ, ಆಗ ಅವನು ಬಹಳ ಸಂಕಟದಿಂದ ತ್ಯಾಗ ಮಾಡಿದನೆಂದು ನಮಗೆ ಅರ್ಥವಾಗುತ್ತದೆ."

(ಖುತ್‌ಬ ಜುಮುಅ, ಡಿಸೆಂಬರ್ 4, 1953)

ಹಾಗಾಗಿ ಇಂದು ತೆಹ್ರೀಕ್-ಎ-ಜದೀದ್‌ನ ಆರ್ಥಿಕ ಜಿಹಾದ್‌ನಲ್ಲಿ ಪ್ರಪಂಚದಾದ್ಯಂತದ ಜಮಾಅತ್‌ಗಳು ಪರಸ್ಪರರಿಗಿಂತ ಹೆಚ್ಚಿನ ತ್ಯಾಗವನ್ನು ನೀಡುತ್ತಿವೆ. ನವೆಂಬರ್ 8, 2024 ರಂದು ನೀಡಿದ ಖುತ್‌ಬ ಜುಮುಅದಲ್ಲಿ, ಸಯ್ಯಿದುನಾ ಹುಝೂರ್ ಅನ್ವರ್[ಅತಬಿಅ] ಅವರು ವಿಶ್ವದಾದ್ಯಂತದ ದೇಶಗಳ ಜಾಗತಿಕ ಹೋಲಿಕೆಯನ್ನು ಪ್ರಸ್ತುತಪಡಿಸಿದ್ದಾರೆ, ಅದರಲ್ಲಿ ಭಾರತವು ಆರನೇ ಸ್ಥಾನವನ್ನು ಪಡೆದುಕೊಂಡಿದೆ. ಅಲ್ಹಮ್ದುಲಿಲ್ಲಾಹ್

ಸಯ್ಯಿದುನಾ ಹುಝೂರ್ ಅನ್ವರ್[ಅತಬಿಅ] ಅವರು ಹೊಸ ವರ್ಷದ ವಾಗ್ದಾನಗಳು ಮತ್ತು ಅದರ ವಸೂಲಾತಿಗಾಗಿ ಅಹ್ಮದಿಯಾ ಜಮಾಅತ್ ಭಾರತಕ್ಕೆ ಹೊಸ ಗುರಿಯನ್ನು ನೀಡಿದ್ದಾರೆ. ಇದನ್ನು ಪೂರೈಸುವುದು ಭಾರತದ ಜಮಾಅತ್‌ಗಳ ಪ್ರಾಥಮಿಕ ಜವಾಬ್ದಾರಿಯಾಗಿದೆ.

ಸಯ್ಯಿದುನಾ ಹುಝೂರ್ ಅನ್ವರ್[ಅತಬಿಅ] ಅವರು ಶುಕ್ರವಾರ, ನವೆಂಬರ್ 3, 2023 ರಂದು ತಮ್ಮ ಖುತ್‌ಬ ಜುಮುಅದಲ್ಲಿ ಹೇಳಿದರು:

"ಆ ಆರಂಭಿಕ ಕಾಲದಲ್ಲಿ ತ್ಯಾಗ ಮಾಡಿದವರ ತಲೆಮಾರುಗಳು, ತಮ್ಮ ಪೂರ್ವಜರ ತ್ಯಾಗಗಳನ್ನು ಸ್ಮರಿಸುತ್ತಾ, ಅವರು ಮತ್ತು ಅವರ ವಂಶಸ್ಥರು ಈ ತ್ಯಾಗಗಳ ಮುಂದುವರಿಕೆಯನ್ನು ಮುಂದುವರಿಸಲು ಪ್ರಯತ್ನಿಸಬೇಕು, ಅವರಿಗೆ ನೀಡಿದ ಅನುಗ್ರಹಗಳಿಗೆ ಹೆಚ್ಚು ಕೃತಜ್ಞರಾಗಿರಬೇಕು. ಮತ್ತು ಅದಕ್ಕಿಂತ ಹೆಚ್ಚು ನೀವು ತ್ಯಾಗ ಮಾಡಬೇಕು."

ಸ್ನೇಹಿತರಲ್ಲಿ ತೆಹ್ರೀಕ್-ಎ-ಜದೀದ್‌ನ ಜಿಹಾದ್ ಕಬೀರ್‌ನಲ್ಲಿ ತಮ್ಮ ವಾರ್ಷಿಕ ವಾಗ್ದಾನಗಳನ್ನು ಕನಿಷ್ಠ 10% ಹೆಚ್ಚಿಸಬೇಕೆಂದು ವಿನಂತಿಸಿಕೊಳ್ಳಲಾಗುತ್ತಿದೆ. ಈ ತ್ಯಾಗವು ಸಯ್ಯದುನಾ ಹಝ್ರತ್ ಖಲೀಫತುಲ್ ಮಸೀಹ್ ಸಾನಿ[ರ] ಅವರ ಉಪದೇಶದ ಪ್ರಕಾರ, ಖಂಡಿತವಾಗಿಯೂ ನಿಮಗಾಗಿ ಮತ್ತು ನಿಮ್ಮ ಮಕ್ಕಳಿಗೆ ಜಾರಿಯಲ್ಲಿರುವ ದಾನದ (ಸದಖ ಜಾರಿಯ) ಪ್ರತಿಫಲವನ್ನು ಹೊಂದಿರುತ್ತದೆ.

ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ, ನಿಮಗೆಲ್ಲರಿಗೂ ಹುಝೂರ್ ಅನ್ವರ್[ಅತಬಿಅ] ಅವರ ನಿರೀಕ್ಷೆಗಳನ್ನು ಪೂರೈಸುವ ಎಲ್ಲಾ ಸಾಮರ್ಥ್ಯವನ್ನು ನೀಡಲಿ ಮತ್ತು ಇದರ ಪರಿಣಾಮವಾಗಿ ನೀವು ಅಸಂಖ್ಯಾತ ಅನುಗ್ರಹಗಳನ್ನು ಪಡೆದುಕೊಳ್ಳುವಂತೆ ಮಾಡಲಿ. ಆಮೀನ್.

**(ವಕೀಲುಲ್ ಮಾಲ್ ತೆಹ್ರೀಕ್-ಎ-ಜದೀದ್ ಖಾದಿಯಾನ್)**

## ನೂರ್ ಆಸ್ಪತ್ರೆ ಖಾದಿಯಾನ್‌ನಲ್ಲಿ Nurse / OTA Male Nurse / Pharmacist ಗಾಗಿ ಜಾಹೀರಾತು

**Nurse / OTA Male Nurse ಗೆ ಶೈಕ್ಷಣಿಕ ಅರ್ಹತೆ:**

(1) ಅಭ್ಯರ್ಥಿಗಳು 10 +2 (ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ) ನಂತರ ಕನಿಷ್ಠ OTA/B.Sc Nursing/GNM ಕೋರ್ಸ್ ಅನ್ನು ಪೂರ್ಣಗೊಳಿಸಿರಬೇಕು.

(2) ಪಂಜಾಬ್ ನರ್ಸಸ್ ರೆಜಿಸ್ಟ್ರೇಷನ್ ಕೌನ್ಸಿಲ್‌ನ ನೋಂದಣಿಯನ್ನು ಹೊಂದಿರಬೇಕು. (ನೋದಣಿ ಇಲ್ಲದಿದ್ದರೆ 6 ತಿಂಗಳೊಳಗೆ Transfer Registration ನ Affidavite ಲಗತ್ತಿಸಬೇಕು)

(3) ವೈದ್ಯಕೀಯ ಸೂಚನೆಗಳನ್ನು ಓದುವ ಸಾಮರ್ಥ್ಯ ಹೊಂದಿರಬೇಕು.

(4) ಹೆಸರಾಂತ ಆಸ್ಪತ್ರೆಯಲ್ಲಿ ಕನಿಷ್ಠ 02 ವರ್ಷಗಳ ಅನುಭವ ಹೊಂದಿರಬೇಕು.

(5) ಅಭ್ಯರ್ಥಿಯ ವಯಸ್ಸು 30 ವರ್ಷಗಳಿಗಿಂತ ಹೆಚ್ಚಿರಬಾರದು, ಅಸಾಧಾರಣ ಪ್ರಕರಣಗಳನ್ನು ಪರಿಗಣಿಸಬಹುದು.

(6) ಗ್ರೇಡ್.9792-223-11576-271-14828-318-17372

(7) ಅಭ್ಯರ್ಥಿಯು ಆರೋಗ್ಯಕರವಾಗಿರಬೇಕು. ಧಾರ್ಮಿಕ ಮತ್ತು ನೈತಿಕ ಸ್ಥಿತಿಯು ಉತ್ತಮವಾಗಿರಬೇಕು. ರೋಗಿಗಳೊಂದಿಗೆ ಹಾಗೂ ಸಹೋದ್ಯೋಗಿಗಳೊಂದಿಗೆ ಸಹಾನುಭೂತಿಯೊಂದಿಗೆ ವರ್ತಿಸಬೇಕು.

**ಫಾರ್ಮಸಿಸ್ಟ್‌ಗೆ ಶೈಕ್ಷಣಿಕ ಅರ್ಹತೆ:**

(1) ಅಭ್ಯರ್ಥಿಯು 10, +2 (ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ) ನಂತರ ನೋಂದಾಯಿತ ಸರ್ಕಾರಿ ಸಂಸ್ಥೆಯಿಂದ ಕನಿಷ್ಠ B.Pharmacy/ D.Pharmacy ಹೊಂದಿರಬೇಕು.

(2) ಪಂಜಾಬ್‌ನ ಫಾರ್ಮಸಿ ಕೌನ್ಸಿಲ್‌ನಲ್ಲಿ ನೋಂದಣಿಯನ್ನು ಹೊಂದಿರಬೇಕು.

(3) ವೈದ್ಯಕೀಯ ಸೂಚನೆಗಳನ್ನು ಓದುವ ಸಾಮರ್ಥ್ಯ ಹೊಂದಿರಬೇಕು.

(4) ಹೆಸರಾಂತ ಆಸ್ಪತ್ರೆಯಲ್ಲಿ ಕನಿಷ್ಠ 02 ವರ್ಷಗಳ ಅನುಭವ ಇರಬೇಕು.

(5) ಅಭ್ಯರ್ಥಿಯ ವಯಸ್ಸು 30 ವರ್ಷಗಳಿಗಿಂತ ಹೆಚ್ಚಿರಬಾರದು, ಅಸಾಧಾರಣ ಪ್ರಕರಣಗಳನ್ನು ಪರಿಗಣಿಸಬಹುದು.

(6) ಗ್ರೇಡ್.11063-302-13479-443-18795-506-22843

(7) ಅಭ್ಯರ್ಥಿಯು ಆರೋಗ್ಯಕರವಾಗಿರಬೇಕು. ಧಾರ್ಮಿಕ ಮತ್ತು ನೈತಿಕ ಸ್ಥಿತಿಯು ಉತ್ತಮವಾಗಿರಬೇಕು. ರೋಗಿಗಳೊಂದಿಗೆ ಹಾಗೂ ಸಹೋದ್ಯೋಗಿಗಳೊಂದಿಗೆ ಸಹಾನುಭೂತಿಯೊಂದಿಗೆ ವರ್ತಿಸಬೇಕು.

**ಅಗತ್ಯ ಸೂಚನೆಗಳು:**

(1) ಬದರ್ ವಾರಪತ್ರಿಕೆಯಲ್ಲಿ ಪ್ರಕಟವಾದ ಕೊನೆಯ ಪ್ರಕಟಣೆಯ ನಂತರ 2 ತಿಂಗಳೊಳಗೆ ಸ್ವೀಕರಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದು.

(2) ಆಸಕ್ತ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ಮುದ್ರಿತ ನಮೂನೆಯಲ್ಲಿ ತಮ್ಮ ಜಿಲ್ಲಾ ಅಮೀರ್/ ಸ್ಥಳೀಯ ಅಮೀರ್/ ಜಮಾಅತ್‌ನ ಅಧ್ಯಕ್ಷರು/ ಮಿಷನರಿ ಉಸ್ತುವಾರಿಯವರ ದೃಢೀಕರಿಸಿದ ಸಹಿ ಮತ್ತು ಮುದ್ರೆಯೊಂದಿಗೆ ಕಳುಹಿಸಬೇಕು.

(3) ಸಂದರ್ಶನದಲ್ಲಿ ಯಶಸ್ಸಿನ ಸಂದರ್ಭದಲ್ಲಿ, ಅಭ್ಯರ್ಥಿಯು ನೂರ್ ಆಸ್ಪತ್ರೆ ಖಾದಿಯನ್‌ನಲ್ಲಿ ವೈದ್ಯಕೀಯ ತಪಾಸಣೆಗೆ ಒಳಗಾಗಬೇಕಾಗುತ್ತದೆ ಮತ್ತು ನೂರ್ ಆಸ್ಪತ್ರೆ ಸಮಿತಿಯ ವರದಿಯ ಪ್ರಕಾರ ಯಾರು ಆರೋಗ್ರವಂತಿರುತ್ತಾರೊ ಆ ಅಭ್ಯರ್ಥಿಗಳು ಮಾತ್ರ ಸೇವೆಸಲ್ಲಿಸಲು ಅರ್ಹರಾಗಿರುತ್ತಾರೆ.

(4) ಆಯ್ಕೆಯ ಸಂದರ್ಭದಲ್ಲಿ, ಅಭ್ಯರ್ಥಿಯು ಖದಿಯಾನ್‌ನಲ್ಲಿ ತನ್ನದೇ ಆದ ವಸತಿ ಸೌಕರ್ಯವನ್ನು ವ್ಯವಸ್ಥೆಗೊಳಿಸಬೇಕು.

(5) ಪ್ರಯಾಣ ವೆಚ್ಚಗಳು ಖಾದಿಯಾನ್ ಸಾರಿಗೆ ಮತ್ತು ಎಲ್ಲಾ ವೈದ್ಯಕೀಯ ವೆಚ್ಚಗಳನ್ನು ಅಭ್ಯರ್ಥಿಯಿಂದ ಭರಿಸಲಾಗುವುದು.

(6) ಸಂದರ್ಶನದ ಸಮಯದಲ್ಲಿ ನಿಮ್ಮ ಮೂಲ ಶೈಕ್ಷಣಿಕ ಪ್ರಮಾಣಪತ್ರಗಳನ್ನು ನಿಮ್ಮೊಂದಿಗೆ ತರುವುದು ಅವಶ್ಯಕ.

**ಗಮನಿಸಿ: ಸಂದರ್ಶನದ ದಿನಾಂಕವನ್ನು ನಂತರ ಅಭ್ಯರ್ಥಿಗಳಿಗೆ ತಿಳಿಸಲಾಗುವುದು.**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

ನಝಾರತ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ
ಖಾದಿಯಾನ್-143516
ಮೊಬೈಲ್: 9682627592, 9888232530, 9682587713
ಕಛೇರಿ: 01872-501130 ಇ-ಮೇಲ್: diwan@qadian.in

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2023-25 Vol No.06, Thursday, 02-09 January 2025, Issue No. 01-02

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

# ಸೈಯಿದುನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಜರ್ಮನಿಯ ಪ್ರವಾಸ ಆಗಸ್ಟ್, ಸೆಪ್ಟೆಂಬರ್ 2023

*(ಬದರ್ ಸಂಚಿಕೆ–49ರ ಉಳಿದ ಭಾಗ ಮುಂದುವರಿಸಲಾಗಿದೆ)*

ಹುಝೂರ್ ಅನ್ವರ್(ಅತಬಅ) ಹೇಳಿದರು. ಗಂಡನ ಬಲಿದಾನದ ಮೇಲೆ ಸಹನೆ ತೋರುವ ಒಂದು ಘಟನೆ ಹೀಗೆ ದೊರೆಯುತ್ತದೆ. ಉಮ್ಮೆ ಇಸ್‌ಹಾಖ್ ಗನ್‌ವಿಮ ವರದಿ ಮಾಡುತ್ತಾರೆ. ಅವರು ತಮ್ಮ ಸಹೋದರನ ಜೊತೆ ಹಝ್ರತ್ ಪೈಗಂಬರ್(ಸ) ರವರನ್ನು ಭೇಟಿಯಾಗಲು ಹೊರಟಿದ್ದರು. ಇನ್ನೂ ಸ್ವಲ್ಪವೇ ದೂರ ಹೋಗಿದ್ದರು, ಅವರ ಸಹೋದರನು ಹೇಳಿದನು. ನಾನು ನನ್ನ ಸಾಮಾನು ಮಕ್ಕದಲ್ಲೇ ಮರೆತುಬಂದಿದ್ದೇವೆ. ಸಹೋದರಿಯೊಡನೆ ಹೇಳಿದರು. ನೀವು ಇಲ್ಲೆ ಕುಳಿತು ಪ್ರತೀಕ್ಷೆಯಲ್ಲಿರಿ. ನಾನು ನನ್ನ ಸಾವಾನು ತೆಗೆದುಕೊಂಡು ಬರುತ್ತೇನೆ. ಸಹೋದರಿ ಹೇಳಿದರು. ನೀವು ಇಲ್ಲೆ ಕುಳಿತುಕೊಂಡು ಹೇಳುತ್ತಾಳೆ, ಎಷ್ಟೋ ದಿನಗಳು ಕಳೆದು ಹೋದವು. ನನಗೆ ಅಲ್ಲಿ ಕುಳಿತುಕೊಂಡು ಹೇಳುತ್ತಾಳೆ, ಎಷ್ಟೋ ದಿನಗಳು ಕಳೆದುಹೋದವು. ಆದರೆ ಸಹೋದರನು ಬರಲಿಲ್ಲ, ಆಕಸ್ಮಾತ್ತಾಗಿ ಒಂದು ದಿನ ನನಗೆ ಪರಿಚಯವಿದ್ದ ಒಬ್ಬ ವ್ಯಕ್ತಿ ಹೋಗುತ್ತಿದ್ದನು, ಅವನು ನನಗೆ ಇಲ್ಲಿ ಕುಳಿತುಕೊಳ್ಳುವ ಕಾರಣ ಕೇಳಿಲ್ಲ. ನಾನು ಹೇಳಿದಾಗ ಅವನು ತಿಳಿಸಿದನು. ನಿನ್ನ ಸಹೋದರನಿಗೆ ನಿನ್ನ ಗಂಡ ಕೊಲೆ ಮಾಡಿಬಿಟ್ಟಿದ್ದಾನೆ. ಉಮ್ಮೆ ಇಸ್‌ಹಾಖ್ ಗನ್‌ವಿಯ ಹೇಳುತ್ತಾಳೆ. ನಾನು **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಹೇಳುತ್ತಾ ಅಲ್ಲಿಂದ ಎದ್ದು ನಿಂತೆ ಮತ್ತು ಪ್ರಯಾಣ ಮುಂದುವರಿಸಿದೆ. ಸಹೋದರನ ಶವದ ಮೇಲೆ, ಅವನು ಇಸ್ಲಾಂ ಧರ್ಮಗೋಸ್ಕರ ತ್ಯಾಗ ಮಾಡಿದ್ದನು.

ಸಹನೆತೋರುವ ಒಂದು ಘಟನೆ ಹೀಗೆ ದೊರೆಯುತ್ತದೆ. ಹಝ್ರತ್ ಸಫಿಯಾ ಹಝ್ರತ್ ಝುಬೇರ್(ರ) ಅವರೊಂದಿಗೆ ಹಿಜ್‌ರತ್ ಮಾಡಿದಳು. ಉಹದ್ ಯುದ್ಧದಲ್ಲಿ ಮುಸಲ್ಮಾನರಿಗೆ ಸೋಲು ಉಂಟಾದಾಗ ಅವಳು ಮದೀನದಿಂದ ಹೊರಟಳು. ಸಹಾಬರೊಂದಿಗೆ ಕೋಪಗೊಳ್ಳುತ್ತಾ ಹೇಳಿದರು: ಹಝ್ರತ್ ಪೈಗಂಬರ್(ಸ) ರವರನ್ನು ಬಿಟ್ಟು ಹೋಗುತ್ತಿರಾ, ಹಝ್ರತ್ ಪೈಗಂಬರ್(ಸ), ಅವರಿಗೆ ಬರುವುದನ್ನು ಕಂಡಾಗ, ಹಝ್ರತ್ ಝುಬೇರ್(ರ) ಅವರಿಗೆ ಸಂಜ್ಞೆ ಮಾಡಿ ಹೇಳಿದರು. ಹುಝೂರ್ ಶವ ತೋರಿಸಬೇಡಿ, ಅವಿಶ್ವಾಸಿಗಳು ಅವರ ಶವನನ್ನು ಕುರೂಪಗೊಳಿಸಿದ್ದಾರೆ. ದುಃಖ ತಾಳಲಾಗಲಿಕ್ಕಿಲ್ಲ. ಹಝ್ರತ್ ಝುಬೇರ್ ಹಝ್ರತ್ ಪೈಗಂಬರ್(ಸ) ರವರ ಈ ಸಂದೇಶ ತಿಳಿಸಿದರು. ಅವರು ಹೇಳಿದರು. ನಾನು ನನ್ನ ಸಹೋದರನ ಇಡೀ ಘಟನೆ ಕೇಳಿಸಿಕೊಂಡಿದ್ದೇನೆ. ಅವಿಶ್ವಾಸಿಗಳು ಅವನೊಟ್ಟಿಗೆ ಏನೆಲ್ಲಾ ಮಾಡಿದ್ದಾರೆ. ಎಲ್ಲವು ತಿಳಿದಿದೆ. ಆದರೆ ಅಲ್ಲಾಹನ ಮಾರ್ಗದಲ್ಲಿ ಇದೇನು ದೊಡ್ಡ ತ್ಯಾಗವಲ್ಲ. ಆಗ ಹಝ್ರತ್ ಪೈಗಂಬರ್(ಸ) ಶವವನ್ನು ನೋಡಲು ಅನುಮತಿ ನೀಡಿದರು. ಅವರು ಶವವನ್ನು ನೋಡಿದರು. ರಕ್ತ ಕುದಿಯುತ್ತಿತ್ತು. ಪ್ರೀತಿಯ ಸಹೋದರನ ಶರೀರ ಛಿದ್ರಛಿದ್ರವಾಗಿ ಬಿದ್ದಿತ್ತು. ಆದರೂ **ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಎಂದು ಹೇಳಿ ಮೌನವಹಿಸಿದರು. ಮತ್ತು ಅವರ ಮುಕ್ತವಾಗಿ ಪ್ರಾರ್ಥಿಸಿದರು.

ಓರ್ವ ಯುವತಿಯ ನಿಷ್ಠೆ ಮತ್ತು ದೇವಭಕ್ತಿಯ ಉನ್ನತವಾದ ಮಾದರಿಯ ಘಟನೆ ಹೀಗಿದೆ. ಹಝ್ರತ್ ಅಸ್ಲಂ ವರದಿ ಮಾಡುತ್ತಾರೆ. ಅವರು ಹಝ್ರತ್ ಉಮರ್ ಫಾರೂಖ್(ರ)ರ ಸ್ವತಂತ್ರಗೊಳಿಸಿದ ಗುಲಾಮರಾಗಿದ್ದರು. ಕೆಲವು ರಾತ್ರಿಗಳ ಪೈಕಿ ಒಂದು ರಾತ್ರಿ ನಾನು ಅಮೀರುಲ್ ಮುಮಿನೀನ್‌ರ ಜೊತೆ ಮದೀನ ಸುತ್ತಲೂ ಸುತ್ತುತ್ತಿದ್ದೇವೆ. ಅವರು(ರ) ಒಂದು ಕ್ಷಣ ಒಂದು ಗೋಡೆಯ ಆಶ್ರಯ ಪಡೆದು ವಿಶ್ರಮಿಸಿದರು. ಅವರು ಆಲಿಸಿದರು, ಓರ್ವ ಮುದುಕಿ ತನ್ನ ಮಗಳೊಂದಿಗೆ ಹೇಳುತ್ತಿದ್ದಾಳೆ. ಏಳು ಹಾಲಿನಲ್ಲಿ ನೀರು ಬೆರೆಸು, ಮಗಳು ಹೇಳಿದಳು. ನೀನು ಆಲಿಸಲಿಲ್ಲವೇ ಅಮೀರು ಮುಮಿನೀನ್ ಹಾಲಿನಲ್ಲಿ ನೀರು ಬೆರೆಸಬಾರದು ಎಂದು ಡಂಗುರ ಹೊರಡಿಸಿದ್ದಾರೆ. ತಾಯಿ ಹೇಳಿದಳು. ಈಗ ಇಲ್ಲಿ ಅಮೀರುಲ್ ಮುಮಿನೀನ್ ಸಹ ಇಲ್ಲ. ಡಂಗುರ ಸಾರುವನು ಇಲ್ಲ, ಜನರ ಪೈಕಿ ಯಾರೂ ನೋಡುತ್ತಿಲ್ಲ. ಮಗಳು ಹೇಳಿದಳು. ಅಲ್ಲಾಹನಾಣೆ, ಈ ಮಾತು ಸಮಂಜಸವಲ್ಲ, ಮುಂದೆ ಮಾತುಗಳನ್ನು ಪಾಲಿಸುವವರಾಗುವುದು ಮತ್ತು ಅವರು ಇಲ್ಲದಿದ್ದಾಗ ದ್ರೋಹ ಬಗೆಯುವುದು ಇದಾಗಿತ್ತು. ಅವರ ಗುಣಮಟ್ಟ, ಆದೇಶ ಇದ್ದರೆ, ಧರ್ಮವನ್ನು ಸ್ವೀಕರಿಸಿದ್ದೀರಿ ಎಂದರೆ ಖಲೀಫರ ಮಾತುಗಳಿಗೆ ಯಾವಾಗಲೂ ಪಾಲಿಸುವ ಅವಶ್ಯಕತೆ ಇರುತ್ತದೆ. ಹಝ್ರತ್ ಉಮರ್ ಅದನ್ನು ಆಲಿಸಿ ತುಂಬಾ ಸಂತಸರಾದರು ಮತ್ತು ಹೇಳಿದರು. ಓ ಅಸ್ಲಂ, ಈ ಮನೆಗೆ ಗುರುತು ಹಚ್ಚಿರಿ, ಅವರು ಗೋಡೆಗೆ ಕಿವಿ ಹಚ್ಚಿ ಆಲಿಸುತ್ತಿದ್ದರು. ಮರುದಿನ ಅವರು ಒಬ್ಬನನ್ನು ಅವರ ಮನೆಗೆ ಕಳುಹಿಸಿದರು ಮತ್ತು ಆ ಹುಡುಗಿಯ ಜೊತೆ ತನ್ನ ಮಗನಾದ ಆಸಿಮರ ಜತೊಎ ನಿಶ್ಚಯಿಸಿದರು. ಇಂತಹ ಸಜ್ಜನ ಹುಡುಗಿ, ಇಷ್ಟೊಂದು ನಿಷ್ಠೆ ಹೊಂದಿದ ಹುಡುಗಿ, ದೇವನು ಯಾವತ್ತೂ ನೋಡುತ್ತಿದ್ದಾನೆ ಎಂಬ ಭಯ, ಅವಳಲ್ಲಿ ಯಾವ ದೋಷವು ಹುಡುಕಬಾರದು, ಅವಳ ಜೊತೆ ಆಸಿಮರ ವಿವಾಹ ಮಾಡಿಸಿದರು ಮತ್ತು ಅವರಿಗೆ ಸಂತಾನವು ಆಯಿತು. ಹಝ್ರತ್ ಉಮರ್ ಬಿನ್ ಅಬ್ದುಲ್ ಅಝೀಝ್, ಅದೇ ಹುಡುಗಿಯ ಸಂತಾನವಾಗಿದ್ದಾರೆ ಎಂದು ತಿಳಿದುಬರುತ್ತದೆ.

ಅಲ್ಲಾಹನು ಸ್ತ್ರೀಯರಿಗೆ ತಮ್ಮ ಶೃಂಗಾರವನ್ನು ಅಡಗಿಲು ಮತ್ತು ಪರದೆ ಆಜ್ಞೆ ನೀಡುತ್ತಾನೆ. ತನ್ನ ದೃಷ್ಟಿಗಳನ್ನು ಹಾಯಿಸದಿರಲು ಹೇಳುತ್ತಾನೆ. ಇದೀಗ ಖುರ್‌ಆನ್ ಪ್ರಾಂಗಣದಲ್ಲಿ ನೀವು ಕೇಳಿದ್ದೀರಿ. ಅದೇ ರೀತಿಯಲ್ಲಿ ತಮ್ಮ ಸೌಂದರ್ಯ ಅಡಗಿಸಿಕೊಳ್ಳಲು, ಇತರ ಪುರುಷರ ಮುಂದೆ ಬಾರದಿರಲು ಆಜ್ಞಾಪಿಸಲಾಗಿದೆ. ಇದೆಲ್ಲ ವಿವರಣೆ ಸೂರಃ ಅನ್ನೂರ್‌ನ್ ವಚನ 32 ರಲ್ಲಿದೆ. ಆದರೆ ಇದರ ಅರ್ಥ ಸ್ತ್ರೀಯರಿಗೆ ಖೈದಿಯಂತೆ ಮಾಡಿ ಎಲ್ಲ ಅನುಗ್ರಹಗಳಿಂದ ವಂಚಿಸಬೇಕೆಂದೇನಲ್ಲ. ಯಾವ ರೀತಿ ಇಂದು ತಾಲಿಬಾನಿಗಳು ಮಾಡುತ್ತಿದ್ದಾರೆ. ಈ ವಚನದ ವ್ಯಾಖ್ಯಾನದಲ್ಲಿ ಹಝುರತ್ ಖಲೀಫತುಲ್ ಮಸೀಹ್ ದ್ವಿತೀಯರ(ರ) ಹೇಳುತ್ತಾರೆ. ಇಸ್ಲಾಂ ಎಂದೂ ಸಹ ಮಹಿಳೆಯರು ಮನೆಗಳಲ್ಲಿ ಖೈದಿಯಂತೆ ಕೂರಲು ಹೇಳುವುದಿಲ್ಲ, ಇಸ್ಲಾಮಿನ ಪ್ರಾಥಮಿಕ ಘಟ್ಟದಲ್ಲಿ ಮುಸ್ಲಿಂ ಮಹಿಳೆಯರು ಹೀಗೆ ಮಾಡುತ್ತಿರಲಿಲ್ಲ ಬದಲು ಅವರು ರಸೂಲುಲ್ಲಾಹ್(ಸ) ರವರ ಉಪದೇಶಗಳನ್ನು ಆಲಿಸಲು ಬರುತ್ತಿದ್ದರು. ಯುದ್ಧಗಳಲ್ಲಿ ಶಾಮೀಲಾಗುತ್ತಿದ್ದರು. ಗಾಯಾಳುಗಳಿಗೆ ಪಟ್ಟಿ ಕಟ್ಟುತ್ತಿದ್ದರು. ಸವಾರಿ ಮಾಡುತ್ತಿದ್ದರು, ಪುರುಷರಿಂದ ವಿದ್ಯೆ ಕಲಿಯುತ್ತಿದ್ದರು ಮತ್ತು ಕಲಿಸುತ್ತಿದ್ದರು. ಹಝ್ರತ್ ಆಯಿಶಾ(ರ) ಪುರುಷರಿಗೆ ಹದೀಸುಗಳನ್ನು ಹೇಳಿಕೊಡುತ್ತಿದ್ದರು ಎಂಬುದು ಸಹ ಸಾಬೀತುಪಟ್ಟಿದೆ. ಅಷ್ಟೇ ಅಲ್ಲ ಒಮ್ಮೆ ಯುದ್ಧದಲ್ಲಿ ನೇತೃತ್ವವಹಿಸಿದ್ದಾರೆ, ಯುದ್ಧ ಮಾಡಿದ್ದಾರೆ, ಹೀಗೆ ಎಲ್ಲಾ ರೀತಿ ಸ್ವಾತಂತ್ರ್ಯ ಲಭ್ಯವಿತ್ತು. ಕೇವಲ ಶಿರ ಕುತ್ತಿಗೆ ಮತ್ತು ಮುಖವನ್ನು ಮುಚ್ಚಿಕೊಳ್ಳುವ ಆಜ್ಞೆಯಿತ್ತು. ಏಕೆಂದರೆ ಪಾಪಗಳಾಗುವ ಸಾಧ್ಯತೆ ಇರುವ ಎಲ್ಲಾ ಮಾರ್ಗಗಳು ಮುಚ್ಚಿರಬೇಕು. ಇದಕ್ಕಿಂತ ಹೆಚ್ಚು ಜಾಗ್ರತೆ ವಹಿಸಲು ಹಿಜಾಬ್ ಧರಿಸುವ ಅಜ್ಞೆ ಇತ್ತೇ ಹೊರತು ಮನೆಗಳಲ್ಲಿ ಖೈದಿಯಾಗಿರಬೇಕು, ಎಲ್ಲ ಶಿಕ್ಷಣ ತರಬೇತಿಗಳಿಂದ ದೂರ ಇರಬೇಕು ಎಂಬುದು ಇಸ್ಲಾಮಿನ ಶಿಕ್ಷಣವಿರಲಿಲ್ಲ, ಅದರಂತೆ ಯಾರೂ ನಡೆದುಕೊಳ್ಳಲಿಲ್ಲ. ಹದೀಸುಗಳಲ್ಲಿ ಬರುತ್ತದೆ. ರಸೂಲುಲ್ಲಾಹ್(ಸ) ರವರು ಶಾಂತ ವಾತಾವರಣದಲ್ಲಿ ಸಹಾಬರಿಂದ ಆಗಾಗ ಮೈತ್ರಿಪೂರ್ಣ ಸ್ಪರ್ಧೆಗಳನ್ನು ಆಯೋಜಿಸುತ್ತಿದ್ದರು. ಅದರಲ್ಲಿ ಭಾಣ

**(ಮುಂದುವರಿಯುವುದು)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.